KAGD400000272023

**<u>ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ರೋಣ</u>**

**ಉಪಸ್ಥಿತಃ ಶ್ರೀ.ಮಹದೇವಪ್ಪ.ಹೆಚ್. ಬಿ.ಎ., ಎಲ್.ಎಲ್.ಬಿ.**

**ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ., ರೋಣ**

**ದಿನಾಂಕ 22 ಜುಲೈ ಮಾಹೆ 2026**

**<u>ಅಸಲು ದಾವಾ ಸಂಖ್ಯೆ: 11/2023</u>**

**<u>ವಾದಿಗಳು:</u>**

1. ಶ್ರೀ. ಮರಿಯಪ್ಪ ತಂದೆ ಚಂದಪ್ಪ ಮಾದರ @ ಹುಣಸಿಮರದ,
   ವಯಾಃ 70 ವರ್ಷ, ಉದ್ಯೋಗಃ ಶೇತ್ಕಿ ,
   ಸಾಃ ಶಾಂತಗೇರಿ ಗ್ರಾಮ, ತಾಃ ಗಜೇಂದ್ರಗಡ, ಜಿಃ ಗದಗ.

2. ಶ್ರೀ. ಶಿವಾನಂದ ತಂದೆ ಮರಿಯಪ್ಪ ಮಾದರ @ ಹುಣಸಿಮರದ,
   ವಯಾಃ 41 ವರ್ಷ, ಉದ್ಯೋಗಃ ಕೆ.ಎಸ್.ಆರ್.ಟಿ.ಸಿ ಕಂಡಕ್ಟರ್ ಮತ್ತು ಡ್ರೈವರ್ ,
   ಸಾಃ ಶಾಂತಗೇರಿ ಗ್ರಾಮ, ತಾಃ ಗಜೇಂದ್ರಗಡ, ಜಿಃ ಗದಗ.

3. ಶ್ರೀ. ಪರಸಪ್ಪ ತಂದೆ ಮರಿಯಪ್ಪ ಮಾದರ @ ಹುಣಸಿಮರದ,
   ವಯಾಃ 35 ವರ್ಷ, ಉದ್ಯೋಗಃ ಶೇತ್ಕಿ ,
   ಸಾಃ ಶಾಂತಗೇರಿ ಗ್ರಾಮ, ತಾಃ ಗಜೇಂದ್ರಗಡ, ಜಿಃ ಗದಗ.

4. ಶ್ರೀ. ವೀರಣ್ಣ ತಂದೆ ಮರಿಯಪ್ಪ ಮಾದರ @ ಹುಣಸಿಮರದ,
   ವಯಾಃ 31 ವರ್ಷ, ಉದ್ಯೋಗಃ ಶೇತ್ಕಿ ,
   ಸಾಃ ಶಾಂತಗೇರಿ ಗ್ರಾಮ, ತಾಃ ಗಜೇಂದ್ರಗಡ, ಜಿಃ ಗದಗ.

5. ಶ್ರೀಮತಿ. ಪಡಿಯವ್ವ ಕೋಂ ಭೀಮಪ್ಪ ಹಾದಿಮನಿ,
   ವಯಾಃ 39 ವರ್ಷ, ಉದ್ಯೋಗಃ ಗೃಹಿಣಿ/ಶೇತ್ಕಿ,
   ಸಾಃ ಶಾಂತಗೇರಿ ಗ್ರಾಮ, ತಾಃ ಗಜೇಂದ್ರಗಡ, ಜಿಃ ಗದಗ.

**(ವಾದಿಯರ ಪರವಾಗಿ ಶ್ರೀ ಎಸ್.ವಿ.ಸಿ., ವಕೀಲರು)**

**<u>ವಿರುದ್ಧ</u>**

**<u>ಪ್ರತಿವಾದಿಗಳುಃ</u>** 1. ಶ್ರೀ. ಹೊನ್ನಪ್ಪ ತಂದೆ ಬಸಪ್ಪ ಮಾದರ,
ವಯಾಃ 53 ವರ್ಷ, ಉದ್ಯೋಗಃ ಶೇತ್ಕಿ ,
ಸಾಃ ಶಾಂತಗೇರಿ ಗ್ರಾಮ, ತಾಃ ಗಜೇಂದ್ರಗಡ, ಜಿಃ ಗದಗ.

2. ಶ್ರೀಮತಿ. ಗಂಗವ್ವ ಕೋಂ ಹೊನ್ನಪ್ಪ ಮಾದರ,
ವಯಾಃ 48 ವರ್ಷ, ಉದ್ಯೋಗಃ ಗೃಹಿಣಿ,
ಸಾಃ ಶಾಂತಗೇರಿ ಗ್ರಾಮ, ತಾಃ ಗಜೇಂದ್ರಗಡ, ಜಿಃ ಗದಗ.

3. ಶ್ರೀ. ಹೊನ್ನಪ್ಪ ತಂದೆ ಭರಮಪ್ಪ ಮಾದರ,
ವಯಾಃ 50 ವರ್ಷ, ಉದ್ಯೋಗಃ ಶೇತ್ಕಿ ,
ಸಾಃ ಶಾಂತಗೇರಿ ಗ್ರಾಮ, ತಾಃ ಗಜೇಂದ್ರಗಡ, ಜಿಃ ಗದಗ.

4. ಶ್ರೀ. ಮರಿಯಪ್ಪ ತಂದೆ ಹೊನ್ನಪ್ಪ ಮಾದರ,
ವಯಾಃ 30 ವರ್ಷ, ಉದ್ಯೋಗಃ ಶಾಂತಗೇರಿ ಗ್ರಾಮದ
ಗ್ರಾಮ ಪಂಚಾಯಿತಿಯಲ್ಲಿ ಸಿಪಾಯಿ,
ಸಾಃ ಶಾಂತಗೇರಿ ಗ್ರಾಮ, ತಾಃ ಗಜೇಂದ್ರಗಡ, ಜಿಃ ಗದಗ.

5. ಶ್ರೀ. ಸಾಂತಪ್ಪ ತಂದೆ ಹೊನ್ನಪ್ಪ ಮಾದರ,
ವಯಾಃ 28 ವರ್ಷ, ಉದ್ಯೋಗಃ ಶಾಂತಗೇರಿ ಗ್ರಾಮದ
ಗ್ರಾಮ ಪಂಚಾಯಿತಿಯಲ್ಲಿ ಸಿಪಾಯಿ,
ಸಾಃ ಶಾಂತಗೇರಿ ಗ್ರಾಮ, ತಾಃ ಗಜೇಂದ್ರಗಡ, ಜಿಃ ಗದಗ.

**(ಪ್ರತಿವಾದಿ ಸಂಖ್ಯೆ.1 ರಿಂದ 5 ರವರ ಪರವಾಗಿ ಶ್ರೀ ಎಸ್.ಹೆಚ್.ಜೆ., ವಕೀಲರು)**

| | |
|---|---|
| **ದಾವೆ ಸಲ್ಲಿಸಿದ ದಿನಾಂಕಃ** | **07.01.2023** |
| **ದಾವೆಯ ಸ್ವರೂಪಃ** | **ಮಾಲೀಕತ್ವ ಘೋಷಣೆ ಮತ್ತು ಶಾಶ್ವತ ಪ್ರತಿಬಂಧಕಾಜ್ಞೆ ಆದೇಶ ಕೋರಿ** |
| **ಅಧಿವಿಚಾರಣೆ ಆರಂಭವಾದ ದಿನಾಂಕಃ** | **27.09.2025** |
| **ಅಧಿವಿಚಾರಣೆ ಮುಕ್ತಾಯವಾದ** | |

| | | | |
|---|---|---|---|
| ದಿನಾಂಕಃ | 10.03.2026 | | |
| ತೀರ್ಪು ಹೊರಡಿಸಿದ ದಿನಾಂಕಃ | 22.07.2026 | | |
| ದಾವಾ ಪ್ರಕ್ರಿಯೆಯ ಒಟ್ಟು ಅವಧಿಃ | ವರ್ಷ<br>03 | ತಿಂಗಳು<br>06 | ದಿನಗಳು<br>15 |

**::ತೀರ್ಪು::**

ವಾದಿಗಳು ಈ ದಾವೆಯನ್ನು ಪ್ರತಿವಾದಿಗಳ ವಿರುದ್ಧ ಗಜೇಂದ್ರಗಡ ತಾಲ್ಲೂಕು ಶಾಂತಗೇರಿ ಗ್ರಾಮದ ವಿ.ಪಿ.ಸಿ.ನಂಬರಃ 651 ರಲ್ಲಿಯ ವಿಸ್ತೀರ್ಣ 25X36 ಅಡಿ ಆಸ್ತಿಗೆ ಸಂಬಂಧಿಸಿದಂತೆ ಮಾಲೀಕತ್ವ ಘೋಷಣೆ ಮತ್ತು ಶಾಶ್ವತ ಪ್ರತಿಬಂಧಕಾಜ್ಞೆ ಆದೇಶ ಕೋರಿ ಸಲ್ಲಿಸಿರುತ್ತಾರೆ.

**2. ದಾವೆಯ ವಾಸ್ತವಾಂಶ ಈ ಕೆಳಗಿನಂತಿರುತ್ತದೆಃ-**

1 ನೇ ವಾದಿಯು, ವಾದಿ 2 ರಿಂದ 5 ರವರ ತಂದೆ ಆಗಿದ್ದು, ಅವರುಗಳು ದಾವಾ ಆಸ್ತಿಯ ಮಾಲೀಕರಾಗಿದ್ದು ಶಾಂತಿಯುತ ಸ್ವಾಧೀನಾನುಭವದಲ್ಲಿ ಇರುತ್ತಾರೆ. ಪ್ರತಿವಾದಿ 1 ರವರು, ಪ್ರತಿವಾದಿ 2 ರವರ ಗಂಡನಾಗಿರುತ್ತಾನೆ. ಪ್ರತಿವಾದಿ 3 ರವರು ಪ್ರತಿವಾದಿ 4 ಮತ್ತು 5 ರವರ ತಂದೆಯಾಗಿರುತ್ತಾರೆ. ಪ್ರತಿವಾದಿಗಳಿಗೆ ಸೇರಿದ ಆಸ್ತಿಯ ನಂಬರ ವಿ.ಪಿ.ಸಿ ನಂಬರಃ 721 ಇದ್ದು, ಈ ಆಸ್ತಿಯು ದಾವಾ ಆಸ್ತಿಯ ಪಶ್ಚಿಮದಲ್ಲಿ ಇರುವ ಸರ್ಕಾರಿ ರಸ್ತೆಗೆ ಹೊಂದಿಕೊಂಡಂತೆ ಇರುತ್ತದೆ. ದಾವಾ ಆಸ್ತಿಯು ಮೂಲತಃ 1 ನೇ ವಾದಿಯ ಅಜ್ಜಿ ದುರಗವ್ವರವರಿಗೆ ಸೇರಿದ ಆಸ್ತಿಯಾಗಿದ್ದು, ಅವರು ಶಾಂತಗೇರಿ ಗ್ರಾಮದಲ್ಲಿ ದೇವದಾಸಿಯಾಗಿ ಸೇವೆ ಸಲ್ಲಿಸುತ್ತಿದ್ದರಿಂದ ಅವರಿಗೆ ಸರ್ಕಾರದಿಂದ ಮಂಜೂರಾದ ಆಸ್ತಿಯಾಗಿದ್ದು, ಆ ಆಸ್ತಿಯಲ್ಲಿ ದುರಗವ್ವರವರು ಜೀವಂತವಾಗಿರುವವರೆಗೆ ಮಾಲೀಕರಾಗಿ ಶಾಂತಿಯುತ

ಸ್ವಾಧೀನಾನುಭವದಲ್ಲಿ ಇದ್ದರು ಸದರಿಯವರ ಮರಣಾನಂತರ 1ನೇ ವಾದಿಯು ವಾರಸುದಾರರನ್ನಾಗಿ ಬಿಟ್ಟು ಮರಣಹೊಂದಿದ್ದು ಅವರು ದಾವಾ ಆಸ್ತಿಯಲ್ಲಿ ಮಾಲೀಕರಾಗಿ ಸ್ವಾಧೀನಾನುಭವದಲ್ಲಿ ಇರುತ್ತಾರೆ.

3. ವಾದಿಗಳು ತಮ್ಮ ವಾದ ಪತ್ರದಲ್ಲಿ ಮುಂದುವರೆದು, ದುರಗವ್ವರವರು, ಜೀವಂತವಾಗಿದ್ದ ಕಾಲಕ್ಕೆ ಸದರಿ ಆಸ್ತಿಯಲ್ಲಿ ಮನೆಯನ್ನು ಕಟ್ಟಿಕೊಂಡು ವಾಸವಾಗಿದ್ದು, ಅವರ ಮರಣಾನಂತರ ಅವರ ಒಬ್ಬನೇ ಮಗ ಚಲ್ಲಪ್ಪರವರು ಮಾಲೀಕನಾಗಿ ಸ್ವಾಧೀನಾನುಭವದಲ್ಲಿ ಇದ್ದರು. ಅವರ ಮರಣಾನಂತರ ವಾದಿಯು ಚಲ್ಲಪ್ಪರವರ ಒಬ್ಬನೇ ಮಗನಾಗಿದ್ದು, ಆತನೇ ಮಾಲೀಕನಾಗಿ ಸ್ವಾಧೀನಾನುಭವದಲ್ಲಿ ಇರುತ್ತಾನೆ. ಈ ಆಸ್ತಿಯು ದುರಗವ್ವರವರು ಶಾಂತಗೇರಿ ಗ್ರಾಮ ಪಂಚಾಯತಿಯ ಸಭಾ ನಡಾವಳಿ ಸಂಖ್ಯೆ.17, ಠರಾವು ಸಂಖ್ಯೆ.98, ವಿ.ನಂಬರ: 5 ರಂತೆ ಕ್ರಮ ಸಂಖ್ಯೆ.3 ರ ಪ್ರಕಾರ ದಿನಾಂಕ: 29.11.2006, ಬದಲಿಗೆ ವಾದಿ 1 ರವರ ಒಪ್ಪಿಗೆಯ ಮೇರೆಗೆ ಅವರ ಹೆಂಡತಿ ದುರಗವ್ವ-1 ರವರ ಹೆಸರನ್ನು ಉತಾರದಲ್ಲಿ ನಮೂದಿಸಲಾಗಿರುತ್ತದೆ. 1ನೇ ವಾದಿಯ ತಾಯಿಯ ಅಜ್ಜಿ ಹಾಗೂ ಆತನ ಹೆಂಡತಿಯ ಹೆಸರುಗಳು ಒಂದೇ ಆಗಿರುವುದರಿಂದ ದುರಗವ್ವ ಮತ್ತು ದುರಗವ್ವ-1 ಎಂದು ದಾವೆಯಲ್ಲಿ ನಮೂದಿಸಲಾಗಿದೆ. 1ನೇ ವಾದಿಯ ಹೆಂಡತಿ ದುರಗವ್ವ-1 ರವರು ದಿನಾಂಕ:10.06.2013 ರಂದು ಮರಣಹೊಂದಿದ್ದು, ವಾದಿಗಳನ್ನು ವಾರಸುದಾರರನ್ನಾಗಿ ಬಿಟ್ಟು ಮರಣಹೊಂದಿರುತ್ತಾರೆ. ದುರಗವ್ವ-1 ರವರು ವಾದಿಗಳನ್ನು ಹೊರತುಪಡಿಸಿ ಬೇರೆ ಯಾರು ವಾರಸುದಾರರು ಇರುವುದಿಲ್ಲ. ವಾದಿಗಳಿಗೆ ದಾವಾ ಆಸ್ತಿಯಲ್ಲಿ ವಾರಸು ಮುಖಾಂತರ ಬಂದಿರುತ್ತದೆ.

4. ವಾದಿಗಳು ಅನಕ್ಷರಸ್ಥರಾಗಿದ್ದರಿಂದ ದುರಗವ್ವ-1ರವರ ಮರಣಾನಂತರ ದಾವಾ ಆಸ್ತಿಯ ಖಾತೆಯನ್ನು ತಮ್ಮ ಹೆಸರಿಗೆ ಮಾಡಿಕೊಂಡಿರಲಿಲ್ಲ ಅದರ ದುರುಪಯೋಗವನ್ನು ಪಡೆದುಕೊಂಡ ಪ್ರತಿವಾದಿಗಳು ದಾವಾ ಆಸ್ತಿಯನ್ನು ಎತ್ತಿ ಹಾಕಬೇಕು ಎಂಬ ಉದ್ದೇಶದಿಂದ ಸದರಿಯವರಿಗೆ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಯಾವುದೇ ಹಕ್ಕು,

ಅಧಿಕಾರ, ಹಿತಾಸಕ್ತಿ, ಸ್ವಾಧೀನಾನುಭವ ಇಲ್ಲದೆ ಇದ್ದರೂ ಸಹಾ ದಾವಾ ಆಸ್ತಿಯಲ್ಲಿ ಶೌಚಾಲಯ ನಿರ್ಮಾಣ ಮಾಡಲು ಪ್ರಾರಂಭಿಸಿದ್ದು, ಅದನ್ನು ತಡೆಹಿಡಿಯಲು ಸಾಧ್ಯವಾಗಿರುವುದಿಲ್ಲ, ಪ್ರತಿವಾದಿಗಳು ಹಠಮಾರಿ ಸ್ವಭಾವದವರಾಗಿದ್ದು, ದಾವಾ ಆಸ್ತಿಯಲ್ಲಿಯ ವಾದಿಗಳ ಶಾಂತಿಯುತ ಸ್ವಾಧೀನಾನುಭವದಲ್ಲಿ ತಂಟೇ ತಕರಾರರನ್ನು ಮಾಡಿರುತ್ತಾರೆ. ಈ ಬಗ್ಗೆ ಶಾಂತಗೇರಿ ಗ್ರಾಮ ಪಂಚಾಯತಿ ಲಿಖಿತವಾಗಿ ದೂರನ್ನು ನೀಡಿದ್ದು, ಆ ಪ್ರಕಾರ ಶಾಂತಗೇರಿ ಗ್ರಾಮ ಪಂಚಾಯತಿಯವರು ದಿನಾಂಕಃ 15.06.2018 ರಂದು ಸ್ಥಳ ಪರಿಶೀಲನೆ ಮಾಡಿದ್ದು, ಆಗ ಪ್ರತಿವಾದಿಗಳು ಡಿಸೆಂಬರ್ 2022 ರವರೆಗೆ ಸುಮ್ಮನಿದ್ದು, ಪುನಃ ದಿನಾಂಕಃ 05.01.2023 ರಂದು ದಾವಾ ಆಸ್ತಿಯಲ್ಲಿಯ ವಾದಿಗಳ ಶಾಂತಿಯುತ ಸ್ವಾಧೀನಾನುಭವಕ್ಕೆ ತಂಟೇ ತಕರಾರು ಮಾಡಿದ್ದರಿಂದ 1 ನೇ ವಾದಿಯು ಶಾಂತಗೇರಿ ಗ್ರಾಮ ಪಂಚಾಯತಿಗೆ ಪುನಃ ಲಿಖಿತ ದೂರನ್ನು ಸಲ್ಲಿಸಿದ್ದು, ಪಂಚಾಯತಿಯವರು ಪ್ರತಿವಾದಿಗಳ ವಿರುದ್ಧ ಯಾವುದೇ ಕ್ರಮವಹಿಸಿರುವುದಿಲ್ಲ. ಆದ್ದರಿಂದ ದಾವೆಯಲ್ಲಿ ಕೋರಿಕೊಂಡಿರುವಂತೆ ಡಿಕ್ರಿ ಮಾಡಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

5. ವಾದಿಗಳು ಈ ದಾವೆಯನ್ನು ಸಲ್ಲಿಸಿದ ನಂತರ ಪ್ರತಿವಾದಿಗಳು ತಮ್ಮ ಪರ ವಕೀಲರ ಮುಖಾಂತರ ಹಾಜರಾಗಿ ಲಿಖಿತ ತಕರಾರನ್ನು ಸಲ್ಲಿಸಿ, ತಮ್ಮ ಲಿಖಿತ ತಕರಾರಿನಲ್ಲಿ ವಾದಪತ್ರದ ಸಂಗತಿಗಳನ್ನು ಅಲ್ಲಗಳೆದು, ಮುಂದುವರೆದು, ವಾದಿಗಳು ಸಲ್ಲಿಸಿರುವ ಈ ದಾವೆಯು ಕಾನೂನು ಮತ್ತು ವಾಸ್ತವಾಂಶದಡಿಯಲ್ಲಿ ಊರ್ಜಿತವಾಗಿರುವುದಿಲ್ಲ. ವಾದಿಗಳು ಸುಳ್ಳು ಚಕ್ಕಬಂದಿ ಮತ್ತು ವಿಸ್ತೀರ್ಣವನ್ನು ನಮೂದಿಸಿ ಈ ದಾವೆಯನ್ನು ಸಲ್ಲಿಸಿರುತ್ತಾರೆ. ವಾದಿಗಳು ದುರಗವ್ವರವರ ವಾರಸುದಾರರು ಇರುತ್ತಾರೆಂದು ತಿಳಿಸಿರುವ ಸಂಗತಿ ಸರಿ ಇರುತ್ತದೆ. ದಾವಾ ಆಸ್ತಿಯನ್ನು ದುರಗವ್ವರವರಿಗೆ ಯಾವುದೇ ರೀತಿಯ ಫಲಾನುಭವಿ ಯೋಜನೆಯಡಿ ದಾವಾ ಆಸ್ತಿಯನ್ನು ನೀಡಿರುವುದಿಲ್ಲ. ಅದನ್ನು ವಾದಿಯರು ತಮ್ಮ ಅನುಕೂಲಕ್ಕೆ ತಕ್ಕಂತೆ ಸೃಷ್ಟಿಸಿಕೊಂಡಿದ್ದು ಇರುತ್ತದೆ. ವಾದಿಗಳು ತಮ್ಮ ವಾದಪತ್ರದ ಪ್ಯಾರಾ ನಂಬರಃ3 ಮತ್ತು 4 ರಡಿಯಲ್ಲಿ ತಿಳಿಸಿದ ಪ್ರಕಾರ ಯಾವುದೇ ಅಧಿಸೂಚನೆ

ಅಥವಾ ಠರಾವು ಆಗಿರುವುದಿಲ್ಲ. ಈ ಎಲ್ಲಾ ಸಂಗತಿಗಳು ತಮ್ಮ ಅನುಕೂಲಕ್ಕೆ ತಕ್ಕಂತೆ ಸೃಷ್ಟಿಸಿಕೊಂಡಿರುವ ಸಂಗತಿಗಳಾಗಿರುತ್ತವೆ. ದಾವಾ ಆಸ್ತಿಯು ಪ್ರತಿವಾದಿಗಳು ಪ್ರತ್ಯಕ್ಷ ವಹಿವಾಟಿನಲ್ಲಿರುವ ಜಾಗ ಇದ್ದು, ಪಂಚಾಯಿತಿಯಿಂದ ಪರವಾನಿಗೆಯನ್ನು ಪಡೆದುಕೊಂಡು ಶೌಚಾಲಯದ ಗುಂಡಿಯನ್ನು ತೆಗೆದು ಶೌಚಾಲಯವನ್ನು ನಿರ್ಮಾಣಮಾಡಿದ್ದು, ಹೇಗಾದರೂ ಮಾಡಿ ಪ್ರತಿವಾದಿಗಳಿಗೆ ತೊಂದರೆ ಕೊಡಬೇಕೆಂದು ಈ ದಾವೆಯನ್ನು ಸಲ್ಲಿಸಿರುತ್ತಾರೆ.

6. ಪ್ರತಿವಾದಿಗಳು ತಮ್ಮ ಲಿಖಿತ ತಕರಾರಿನಲ್ಲಿ ಮುಂದುವರೆದು, ಶಾಂತಗೇರಿ ಗ್ರಾಮದ ವಿ.ಪಿ.ಸಿ ನಂಬರ: 721 ಅಂತಾ ಗ್ರಾಮ ಪಂಚಾಯತಿಯಲ್ಲಿ ಠರಾವು ಮಾಡುವುದರ ಮೂಲಕ ಈ ದಾವಾ ಆಸ್ತಿಯನ್ನು ಪ್ರತಿವಾದಿಯರಿಗೆ ನೀಡಿದ್ದು, ಅದರ ಚಕ್ಕಬಂದಿ ಪೂರ್ವಕ್ಕೆ: ಸರಕಾರಿ ರಸ್ತೆ, ಪಶ್ಚಿಮಕ್ಕೆ: ಮರಿಯಪ್ಪ ಚಾಳಪ್ಪ ಹುಣಸಿಮರದ ಇವರ ಜಾಗೆ, ಉತ್ತರಕ್ಕೆ: ಚಾಳಮ್ಮನ ದೇವಸ್ಥಾನ, ದಕ್ಷಿಣಕ್ಕೆ: ಸಿಸಿ ರಸ್ತೆ ಈ ರೀತಿ ಇದರ ಚಕಬಂದಿ ಇದ್ದು, ಇದರ ವಿಸ್ತೀರ್ಣ ಪೂರ್ವ ಪಶ್ಚಿಮವಾಗಿ 18 ಅಡಿ, ಉತ್ತರ-ದಕ್ಷಿಣವಾಗಿ 20 ಅಡಿ ಆಸ್ತಿ ಇದ್ದು, ಈ ಆಸ್ತಿಯನ್ನು ವಾದಿಯರು ಹೇಗಾದರೂ ಮಾಡಿ ಎತ್ತಿಹಾಕಬೇಕೆಂಬ ದುರುದ್ದೇಶದಿಂದ ಈ ದಾವೆಯನ್ನು ಮಾಡಿದ್ದು, ವಾದಿಯರು ಖೊಟ್ಟಿ ಮತ್ತು ಬನಾವಟಿ ದಾಖಲೆಗಳನ್ನು ಸೃಷ್ಟಿಸಿಕೊಂಡು ಸದರಿ ದಾಖಲೆಗಳನ್ನು ಮುಂದು ಮಾಡಿ ಪ್ರತಿವಾದಿಯರಿಗೆ ತೊಂದರೆ ಕೊಡುವ ದುರುದ್ದೇಶದಿಂದ ಈ ದಾವೆಯನ್ನು ಸಲ್ಲಿಸಿರುತ್ತಾರೆ.

7. ಪ್ರತಿವಾದಿಗಳು ತಮ್ಮ ಲಿಖಿತ ತಕರಾರಿನಲ್ಲಿ ಮುಂದುವರೆದು, ಶಾಂತಿಗೇರಿ ಗ್ರಾಮ ಪಂಚಾಯತ ಆಸ್ತಿ ನಂಬರ: 721 ಇದನ್ನು ಒಬ್ಬ ಹನಮವ್ವ ಕೋಂ ಬಸಪ್ಪ ಮಾದರ ಇವರಿಗೆ ಶಾಂತಗೇರಿ ಗ್ರಾಮ ಪಂಚಾಯತಿಯವರು ದಿನಾಂಕ: 12.12.2012 ರಂದು ಗ್ರಾಮ ಪಂಚಾಯತಿಯಲ್ಲಿನ ಸಭೆ ನಂಬರ: 6, ಠರಾವು ನಂಬರ: 41 ರಡಿಯಲ್ಲಿ ಗ್ರಾಮ ಪಂಚಾಯತಿಯವರು ನಿಯಮಾನುಸಾರ ಪ್ರತಿವಾದಿ ನಂಬರ: 1 ನೇದವರ ತಾಯಿ, 2 ನೇದವರ ಅತ್ತೆ, 3 ಮತ್ತು 4 ನೇದವರ ಅಜ್ಜಿಯಾದ

ಹನಮವ್ವ ಕೋಂ ಬಸಪ್ಪ ಮಾದರ ಇವರ ಹೆಸರಿಗೆ ನೀಡುವಂತೆ ಠರಾವು ಪಾಸ ಮಾಡಿದ್ದು, ಅವರ ವಾರಸುದಾರರಾದ ಪ್ರತಿವಾದಿಯರು ಅಂದಿನಿಂದ ಇಂದಿನವರೆಗೂ ಪ್ರತ್ಯಕ್ಷ ಕಬ್ಜಾ ವಹಿವಾಟಿಯಲ್ಲಿ ಮುಂದುವರೆಯುತ್ತಾ ಬಂದಿದ್ದು ಇರುತ್ತದೆ. ಸದರಿ ಆಸ್ತಿಗೆ ಪ್ರತಿವಾದಿಗಳೇ ಮಾಲೀಕರು ಆಗಿರುತ್ತಾರೆ. ಈ ದಾವೆಯಲ್ಲಿ ಸಂಬಂಧಪಟ್ಟ ಗ್ರಾಮ ಪಂಚಾಯತಿ ಅಧಿಕಾರಿಗಳನ್ನು ಪಕ್ಷಗಾರರನ್ನಾಗಿ ಮಾಡಬೇಕಾಗಿದ್ದು, ಅವರನ್ನು ಪಕ್ಷಗಾರರನ್ನಾಗಿ ಮಾಡದೇ ಇರುವುದರಿಂದ ದಾವೆಯು ಊರ್ಜಿತವಾಗಿರುವುದಿಲ್ಲ. ಪ್ರತಿವಾದಿಯರಿಗೆ ಮಾನಸಿಕ ಹಾಗೂ ಆರ್ಥಿಕವಾಗಿ ನಷ್ಟ ಉಂಟು ಮಾಡುವ ಉದ್ದೇಶದಿಂದ ಈ ದಾವೆಯನ್ನು ದಾಖಲಿಸಿ, ವಾದಿಯರು ಪ್ರತಿದಿನ ದಾವೆ, ಅರ್ಜಿ, ಪಿರ್ಯಾದಿಗಳನ್ನು ನೀಡುತ್ತಾ ಪ್ರತಿವಾದಿಯರಿಗೆ ತೊಂದರೆ ಕೊಡುತ್ತಾ ಬಂದಿರುತ್ತಾರೆ. ಆದ್ದರಿಂದ ಈ ದಾವೆಯಲ್ಲಿ ತಲಾ ರೂ.1,00,000/- ಪರಿಹಾರವನ್ನು ಪ್ರತಿವಾದಿಗಳಿಗೆ ಕೊಡಿಸುವ ಮುಖಾಂತರ ದಾವೆಯನ್ನು ಖರ್ಚಿನೊಂದಿಗೆ ವಜಾಗೊಳಿಸಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

8. ಈ ಮೇಲಿನ ವಾಸ್ತವಾಂಶಗಳಿಂದ ಈ ಕೆಳಕಂಡ ವಿವಾದಾಂಶಗಳು ಹಿಂದಿನ ಪೀಠಾಶೀನಾಧಿಕಾರಿಗಳ ನಿರ್ಣಯಕ್ಕೆ ಉದ್ಭವಿಸಿರುತ್ತವೆ:-

**::ISSUES::**

1. Whether the plaintiffs prove that, they are the owner in possession of the suit schedule property?
2. Whether the plaintiffs prove alleged interference caused by defendants?
3. Whether the plaintiff is entitled for the reliefs as sought for?
4. What order or decree?

**::ADDITIONAL ISSUES::**

1. Whether the plaintiffs are entitled for mandatory injunction?

9. ವಾದಿಗಳು ಈ ಮೇಲಿನ ವಿವಾದಾಂಶಗಳನ್ನು ರುಜುವಾತುಪಡಿಸಲು, 5 ಮತ್ತು 4 ನೇ ವಾದಿಗಳು ಸ್ವತಃ ಪಿ.ಡಬ್ಲ್ಯೂ.1 ಮತ್ತು 2 ಎಂದು ವಿಚಾರಣೆಗೊಳಗಾಗಿ ನಿಪಿ-1 ರಿಂದ 14 ದಾಖಲೆಗಳನ್ನು ಹಾಜರುಪಡಿಸಿ ನಿಶಾನೆಯಾಗಿ ಗುರುತಿಸಿಕೊಂಡಿದ್ದಾರೆ. ಪ್ರತಿವಾದಿಗಳ ಪರವಾಗಿ 4 ನೇ ಪ್ರತಿವಾದಿಯು ಸ್ವತಃ ಡಿ.ಡಬ್ಲ್ಯೂ.1 ಎಂದು ವಿಚಾರಣೆಗೊಳಗಾಗಿ ನಿಡಿ.1 ರಿಂದ 8 ದಾಖಲೆಗಳನ್ನು ಹಾಜರುಪಡಿಸಿ ನಿಶಾನೆಯಾಗಿ ಗುರುತಿಸಿಕೊಂಡಿರುತ್ತಾರೆ.

10. ವಾದಿಗಳು ಹಾಗೂ ಪ್ರತಿವಾದಿಗಳ ಪರ ವಕೀಲರ ವಾದವನ್ನು ಆಲಿಸಲಾಯಿತು.

11. ಮೇಲಿನ ವಿವಾದಾಂಶಗಳಿಗೆ ನ್ಯಾಯಾಲಯದ ಉತ್ತರ ಈ ಕೆಳಗಿನಂತಿರುತ್ತವೆ:-

**ವಿವಾದಾಂಶ 1 ಕ್ಕೆ: ನಕಾರಾತ್ಮಕವಾಗಿ .**
**ವಿವಾದಾಂಶ 2 ಕ್ಕೆ: ನಕಾರಾತ್ಮಕವಾಗಿ .**
**ವಿವಾದಾಂಶ 3 ಕ್ಕೆ: ನಕಾರಾತ್ಮಕವಾಗಿ .**
**ಹೆಚ್ಚುವರಿ ವಿವಾದಾಂಶ 1 ಕ್ಕೆ: ನಕಾರಾತ್ಮಕವಾಗಿ .**
**ವಿವಾದಾಂಶ 4 ಕ್ಕೆ: ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ.**

**::ಕಾರಣಗಳು::**

12. **ವಿವಾದಾಂಶ 1 ರಿಂದ 3 ಮತ್ತು ಹೆಚ್ಚುವರಿ ವಿವಾದಾಂಶ 1:** ಈ ವಿವಾದಾಂಶಗಳು ಒಂದಕ್ಕೊಂದು ಸಂಬಂಧ ಹೊಂದಿರುವುದರಿಂದ ಸಾಕ್ಷಿಗಳ ಪುನರಾವರ್ತನೆಯನ್ನು ತಡೆಯುವ ಉದ್ದೇಶಕ್ಕಾಗಿ ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

13. ವಾದಿಗಳು ಈ ದಾವೆಯನ್ನು ಗಜೇಂದ್ರಗಡ ತಾಲ್ಲೂಕು ಶಾಂತಗೇರಿ ಗ್ರಾಮದ ರಿ.ಸ.ನಂಬರಃ 651 ರಲ್ಲಿಯ ವಿಸ್ತೀರ್ಣ 25X36 ಅಡಿ ಆಸ್ತಿಗೆ ಸಂಬಂಧಪಟ್ಟಂತೆ ಪ್ರತಿವಾದಿಗಳ ವಿರುದ್ದ ಮಾಲೀಕತ್ವ ಘೋಷಣೆ ಮತ್ತು ಶಾಶ್ವತ ಪ್ರತಿಬಂಧಕಾಜ್ಞೆ ಆದೇಶ ಕೋರಿ ಸಲ್ಲಿಸಿರುವುದರಿಂದ ನ್ಯಾಯಾಲಯದ ಮುಂದೆ ತಮ್ಮ ಮೌಖಿಕ ಹಾಗೂ ದಾಖಲೆಗಳ ಸಾಕ್ಷ್ಯದ ಮುಖಾಂತರ ವಾದಿಗಳು ದಾವಾ ಆಸ್ತಿಯ ಮಾಲೀಕರಾಗಿದ್ದು, ಸದರಿ ಆಸ್ತಿಯಲ್ಲಿಯ ವಾದಿಗಳ ಶಾಂತಿಯುತ ಸ್ವಾಧೀನಾನುಭವಕ್ಕೆ ತಂಟೇ ತಕರಾರು ಮಾಡುವುದರ ಮುಖಾಂತರ ಪ್ರತಿವಾದಿಗಳು ದಾವಾ ಆಸ್ತಿಯಲ್ಲಿ ಶೌಚಾಲಯವನ್ನು ನಿರ್ಮಾಣ ಮಾಡಿದ್ದಾರೆಂದು ರುಜುವಾತುಪಡಿಸಿದರೆ ವಾದಿಗಳು ದಾವೆಯಲ್ಲಿ ಕೋರಿಕೊಂಡ ಪರಿಹಾರಗಳನ್ನು ಪಡೆದುಕೊಳ್ಳಲು ಅರ್ಹರಿರುತ್ತಾರೆ. ಪ್ರತಿವಾದಿಗಳ ದುರ್ಬಲತೆಯನ್ನು ವಾದಿಗಳು ಅಸ್ತ್ರವನ್ನಾಗಿ ಮಾಡಿಕೊಂಡು ದಾವೆಯಲ್ಲಿ ಕೋರಿಕೊಂಡ ಪರಿಹಾರಗಳನ್ನು ಪಡೆದುಕೊಳ್ಳಲು ಅರ್ಹರಿರುವುದಿಲ್ಲ.

14. ಈ ಹಂತದಲ್ಲಿ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯ ಹಾಗೂ ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯದ ತೀರ್ಪುಗಳು.

**1. AIR 2014 SC 937 – Union of India and others V/s Vaasavi Co-operative housing society Limited and Others :**

(A) **<u>Specific relief Act 1963- Sec. 34-</u>**Suit for declaration of Title-Onus to prove his title is on plaintiff- He cannot succeeded on weakness of defendant case.- The plaintiff in a suit for declaration of title and possession could succeed only on the strength of its own title and that could be done only by adducing sufficient evidence to discharge the onus on it, irrespective of the question whether the defendants

have proved their case or not. Even if the title set up by the defendants is found against, in the absence of establishment of plaintiff's own title, plaintiff must be non suited –

(C) **Specific Relief Act- Sec. 34** Suit for declaration of title – Plaintiff relying on family settlement- absence of suit land in family settlement- no explanation given by plaintiff – title of plaintiff to suit land becomes doubtful – decreeing suit by finding weakness in evidence of defendant, improper

**2. Ruling reported in, 2004 (1) KCCR 662 K. Gopal Reddy Dead by LR's V/s Suryanarayana and others**

**(B) –Pleading and proof** – whenever a party approaches the court for a relief, based on the pleadings and issues, he has to prove his case – A suit has to be decided based on merits and demerits of the party who approaches the court. Weakness of defendant cannot be considered as a trump card for the plaintiffs.

ಸದರಿ ತೀರ್ಪುಗಳನ್ನು ಪರಿಶೀಲಿಸಲಾಗಿ ಯಾರು ನ್ಯಾಯಾಲಯಕ್ಕೆ ಬಂದು ದಾವೆಯನ್ನು ಘೋಷಣಾತ್ಮಕ ಡಿಕ್ರಿ ಕೋರಿ ಸಲ್ಲಿಸಿರುತ್ತಾರೆಯೋ ಅವರೇ ಸ್ವತಂತ್ರವಾಗಿ ನ್ಯಾಯಾಲಯದ ಮುಂದೆ ಸದರಿ ಸಂಗತಿಗಳನ್ನು ವಾದಪತ್ರದಲ್ಲಿ ತಿಳಿಸಿ ಸೂಕ್ತ ದಾಖಲೆಗಳ ಮುಖಾಂತರ ರುಜುವಾತುಪಡಿಸಬೇಕು, ಪ್ರತಿವಾದಿಗಳ ದುರ್ಬಲತೆಯನ್ನು ವಾದಿಗಳು ಅಸ್ತ್ರವಾಗಿ ಪಡೆದುಕೊಂಡು ನ್ಯಾಯಾಲಯದಿಂದ ಡಿಕ್ರಿ ಪಡೆದುಕೊಳ್ಳಲು ಬರುವುದಿಲ್ಲ ಎಂದು ಇರುತ್ತದೆ.

15. ಈ ಮೇಲಿನ ಗೌರವಾನ್ವಿತ ನ್ಯಾಯಾಲಯದ ತೀರ್ಪುಗಳನ್ನು ಆಧರಿಸಿ ಈ ದಾವೆಯಲ್ಲಿ ಇರುವ ಸಂಗತಿಗಳನ್ನು ಪರಿಶೀಲಿಸಲಾಗಿ ವಾದಿಗಳು ಈ ದಾವೆಯನ್ನು ದಾವಾ ಆಸ್ತಿಯು ಮೂಲತಃ 1ನೇ ವಾದಿಯ ತಂದೆಯ ತಾಯಿ ದುರಗವ್ವರವರು ದೇವದಾಸಿಯಾಗಿ ಶಾಂತಗೇರಿ ಗ್ರಾಮದಲ್ಲಿ ಕೆಲಸ ಮಾಡುತ್ತಿದ್ದುದರಿಂದ ದಾವಾ ಆಸ್ತಿಯನ್ನು ದುರಗವ್ವರವರು ಹೊಂದಿದ್ದರು, ತದನಂತರ ಅವರೇ ಸದರಿ ಆಸ್ತಿಗೆ ಮಾಲೀಕರಾಗಿ ಶಾಂತಿಯುತ ಸ್ವಾಧೀನಾನುಭವದಲ್ಲಿ ಇದ್ದರು, ಅವರ ಮರಣಾನಂತರ ದುರಗವ್ವನ ಏಕೈಕ ಮಗನಾದ ಅಂದರೆ 1ನೇ ವಾದಿಯ ತಂದೆ ಚಲ್ಲಪ್ಪರವರನ್ನು ಬಿಟ್ಟು ಮರಣಹೊಂದಿದ್ದರು, ಆತನು ಹನಮವ್ವ ಎನ್ನುವವರನ್ನು ಮದುವೆಯಾಗಿದ್ದನು, ಅವರುಗಳು 1ನೇ ವಾದಿಯನ್ನು ಬಿಟ್ಟು ಮರಣಹೊಂದಿರುತ್ತಾರೆ, ಆ ಆಸ್ತಿಯಲ್ಲಿ ದುರಗವ್ವರವರು ಜೀವಂತವಾಗಿದ್ದಾಗ ಮನೆ ಕಟ್ಟಿಕೊಂಡು ವಾಸವಾಗಿದ್ದರು, ಆಕೆಯ ಮರಣಾನಂತರ ಮಗ ಚಲ್ಲಪ್ಪ, ಆತನ ಮರಣಾನಂತರ ಒಬ್ಬನೇ ಮಗ 1ನೇ ವಾದಿ ಮಾಲೀಕನಾಗಿ ಸ್ವಾಧೀನಾನುಭವದಲ್ಲಿರುತ್ತಾನೆ. ಸದರಿ ಆಸ್ತಿಯನ್ನು ಶಾಂತಗೇರಿ ಗ್ರಾಮ ಪಂಚಾಯತಿಯವರು ಸಭಾ ನಡಾವಳಿಯ ನಿರ್ಣಯ ಸಂಖ್ಯೆ.15, ಠರಾವು ಸಂಖ್ಯೆ.98, ವಿ.ನಂಬರಃ 5, ಕ್ರಮ ಸಂಖ್ಯೆ.3 ರ ಪ್ರಕಾರ ದಿನಾಂಕಃ 29.11.2006 ರಂದು 1ನೇ ವಾದಿಯ ಒಪ್ಪಿಗೆಯ ಮೇರೆಗೆ ಆತನ ಹೆಂಡತಿ ದುರಗವ್ವ-1 ರವರ ಹೆಸರನ್ನು ದಾವಾ ಆಸ್ತಿಯ ಉತಾರದಲ್ಲಿ ದಾಖಲಿಸಲಾಗಿರುತ್ತದೆ. ಸದರಿ ಆಸ್ತಿಯ ಮೇಲೆ ವಾದಿಗಳಿಗೆ ಯಾವುದೇ ಹಕ್ಕು, ಅಧಿಕಾರ, ಹಿತಾಸಕ್ತಿ, ಸ್ವಾಧೀನಾನುಭವ ಇಲ್ಲದೆ ಇದ್ದರೂ ಸಹಾ ಗ್ರಾಮ ಪಂಚಾಯತಿಯವರೊಂದಿಗೆ ಸೇರಿಕೊಂಡು ದಾಖಲೆಗಳನ್ನು ಸೃಷ್ಟಿಸಿಕೊಂಡು ದಾವಾ ಆಸ್ತಿಯಲ್ಲಿ ಶೌಚಾಲಯವನ್ನು ನಿರ್ಮಾಣ ಮಾಡಿರುತ್ತಾರೆ. ಆ ಕಾರಣಕ್ಕಾಗಿ ಈ ದಾವೆಯನ್ನು ಸಲ್ಲಿಸಲಾಗಿರುತ್ತದೆಂದು ತಿಳಿಸಿರುತ್ತಾರೆ.

16. ದಾವೆಯ ಸಂಗತಿಗಳನ್ನು ರುಜುವಾತುಪಡಿಸಲು ವಾದಿ 5 ಮತ್ತು 4 ರವರು ಸ್ವತಃ ಪಿ.ಡಬ್ಲ್ಯೂ.1 ಮತ್ತು 2 ಎಂದು ವಿಚಾರಣೆಗೊಳಗಾಗಿ ತಮ್ಮ ಸಾಕ್ಷ್ಯದಲ್ಲಿ ವಾದಪತ್ರದ ಸಂಗತಿಗಳನ್ನು ಪುನರುಚ್ಚರಿಸಿರುತ್ತಾರೆ.

17. ವಾದಿಗಳ ದಾವೆ ಏನೆಂದರೆ, ದಾವಾ ಆಸ್ತಿಯು ಮೂಲತಃ 1ನೇ ವಾದಿಯ ತಂದೆಯ ತಾಯಿ ದುರಗವ್ವರವರು ದೇವದಾಸಿಯಾಗಿ ಶಾಂತಗೇರಿ ಗ್ರಾಮದಲ್ಲಿ ಕೆಲಸ ಮಾಡುತ್ತಿದ್ದುದರಿಂದ ದಾವಾ ಆಸ್ತಿಯನ್ನು ದುರಗವ್ವರವರು ಹೊಂದಿದ್ದರು, ತದನಂತರ ಅವರೇ ಸದರಿ ಆಸ್ತಿಗೆ ಮಾಲೀಕರಾಗಿ ಶಾಂತಿಯುತ ಸ್ವಾಧೀನಾನುಭವದಲ್ಲಿ ಇದ್ದರು, ಅವರ ಮರಣಾನಂತರ ದುರಗವ್ವನ ಏಕೈಕ ಮಗನಾದ ಅಂದರೆ 1ನೇ ವಾದಿಯ ತಂದೆ ಚಲ್ಲಪ್ಪರವರನ್ನು ಬಿಟ್ಟು ಮರಣಹೊಂದಿದ್ದರು, ಆತನು ಹನಮವ್ವ ಎನ್ನುವವರನ್ನು ಮದುವೆಯಾಗಿದ್ದನು, ಅವರುಗಳು 1ನೇ ವಾದಿಯನ್ನು ಬಿಟ್ಟು ಮರಣಹೊಂದಿರುತ್ತಾರೆ, ಆ ಆಸ್ತಿಯಲ್ಲಿ ದುರಗವ್ವರವರು ಜೀವಂತವಾಗಿದ್ದಾಗ ಮನೆ ಕಟ್ಟಿಕೊಂಡು ವಾಸವಾಗಿದ್ದರು, ಆಕೆಯ ಮರಣಾನಂತರ ಮಗ ಚಲ್ಲಪ್ಪ, ಆತನ ಮರಣಾನಂತರ ಒಬ್ಬನೇ ಮಗ 1ನೇ ವಾದಿ ಮಾಲೀಕನಾಗಿ ಸ್ವಾಧೀನಾನುಭವದಲ್ಲಿರುತ್ತಾನೆ. ಸದರಿ ಆಸ್ತಿಯನ್ನು ಶಾಂತಗೇರಿ ಗ್ರಾಮ ಪಂಚಾಯತಿಯವರು ಸಭಾ ನಡಾವಳಿಯ ನಿರ್ಣಯ ಸಂಖ್ಯೆ.15, ಠರಾವು ಸಂಖ್ಯೆ.98, ವಿ.ನಂಬರಃ 5, ಕ್ರಮ ಸಂಖ್ಯೆ.3 ರ ಪ್ರಕಾರ ದಿನಾಂಕಃ 29.11.2006 ರಂದು 1ನೇ ವಾದಿಯ ಒಪ್ಪಿಗೆಯ ಮೇರೆಗೆ ಆತನ ಹೆಂಡತಿ ದುರಗವ್ವ-1 ರವರ ಹೆಸರನ್ನು ದಾವಾ ಆಸ್ತಿಯ ಉತಾರದಲ್ಲಿ ದಾಖಲಿಸಲಾಗಿರುತ್ತದೆ. ಸದರಿ ಆಸ್ತಿಯ ಮೇಲೆ ವಾದಿಗಳಿಗೆ ಯಾವುದೇ ಹಕ್ಕು, ಅಧಿಕಾರ, ಹಿತಾಸಕ್ತಿ, ಸ್ವಾಧೀನಾನುಭವ ಇಲ್ಲದೆ ಇದ್ದರೂ ಸಹಾ ಗ್ರಾಮ ಪಂಚಾಯತಿಯವರೊಂದಿಗೆ ಸೇರಿಕೊಂಡು ದಾಖಲೆಗಳನ್ನು ಸೃಷ್ಟಿಸಿಕೊಂಡು ದಾವಾ ಆಸ್ತಿಯಲ್ಲಿ ಶೌಚಾಲಯವನ್ನು ನಿರ್ಮಾಣ ಮಾಡಿರುತ್ತಾರೆ, ಎಂಬುದಾಗಿರುತ್ತದೆ.

18. ಪ್ರತಿವಾದಿಗಳ ಪರವಾಗಿ ದಾವೆಯಲ್ಲಿ ಪ್ರತಿವಾದಿಗಳು ತಮ್ಮ ನಿಲುವನ್ನು ರುಜುವಾತುಪಡಿಸುವ ಸಲುವಾಗಿ 4ನೇ ಪ್ರತಿವಾದಿಯ ಸ್ವತಃ ಡಿ.ಡಬ್ಲ್ಯೂ.1 ಎಂದು ವಿಚಾರಣೆಗೊಳಗಾಗಿ ತಮ್ಮ ಸಾಕ್ಷ್ಯದಲ್ಲಿ ಲಿಖಿತ ತಕರಾರಿನ ಸಂಗತಿಗಳನ್ನು ಪುನರುಚ್ಚರಿಸಿರುತ್ತಾರೆ.

19. ಅದೇರೀತಿ ದಾವೆಯಲ್ಲಿ ಪ್ರತಿವಾದಿಗಳ ಪ್ರತಿವಾದ ಏನೆಂದರೆ, ದಾವಾ ಆಸ್ತಿಯನ್ನು ದುರಗವ್ವರವರಿಗೆ ಯಾವುದೇ ರೀತಿಯ ಫಲಾನುಭವಿ ಯೋಜನೆಯಡಿ ದಾವಾ ಆಸ್ತಿಯನ್ನು ನೀಡಿರುವುದಿಲ್ಲ, ಅದನ್ನು ವಾದಿಯರು ತಮ್ಮ ಅನುಕೂಲಕ್ಕೆ ತಕ್ಕಂತೆ ಸೃಷ್ಟಿಸಿಕೊಂಡಿದ್ದು ಇರುತ್ತದೆ, ವಾದಿಗಳು ತಮ್ಮ ವಾದಪತ್ರದ ಪ್ಯಾರಾ ನಂಬರ:3 ಮತ್ತು 4 ರಡಿಯಲ್ಲಿ ತಿಳಿಸಿದ ಪ್ರಕಾರ ಯಾವುದೇ ಅಧಿಸೂಚನೆ ಅಥವಾ ಠರಾವು ಆಗಿರುವುದಿಲ್ಲ, ಈ ಎಲ್ಲಾ ಸಂಗತಿಗಳು ತಮ್ಮ ಅನುಕೂಲಕ್ಕೆ ತಕ್ಕಂತೆ ಸೃಷ್ಟಿಸಿಕೊಂಡಿರುವ ಸಂಗತಿಗಳಾಗಿರುತ್ತವೆ, ದಾವಾ ಆಸ್ತಿಯು ಪ್ರತಿವಾದಿಗಳು ಪ್ರತ್ಯಕ್ಷ ವಹಿವಾಟಿನಲ್ಲಿರುವ ಜಾಗ ಇದ್ದು, ಪಂಚಾಯಿತಿಯಿಂದ ಪರವಾನಿಗೆಯನ್ನು ಪಡೆದುಕೊಂಡು ಶೌಚಾಲಯದ ಗುಂಡಿಯನ್ನು ತೆಗೆದು ಶೌಚಾಲಯವನ್ನು ನಿರ್ಮಾಣಮಾಡಿದ್ದು, ಹೇಗಾದರೂ ಮಾಡಿ ಪ್ರತಿವಾದಿಗಳಿಗೆ ತೊಂದರೆ ಕೊಡಬೇಕೆಂದು ಈ ದಾವೆಯನ್ನು ಸಲ್ಲಿಸಿರುತ್ತಾರೆ, ಎಂಬುದಾಗಿರುತ್ತದೆ.

20. ವಾದಿಗಳು ದಾವೆಯ ಸಂಗತಿಗಳನ್ನು ರುಜುವಾತುಪಡಿಸುವ ಸಲುವಾಗಿ ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ನಿಪಿ.1 ದಾಖಲೆಯು ಶಾಂತಗೇರಿ ಪಂಚಾಯತಿಯವರು ನೀಡಿರುವ ಖಾತಾ ಉತಾರ ಇದ್ದು, ಸದರಿ ದಾಖಲೆಯನ್ನು ಪರಿಶೀಲಿಸಲಾಗಿ ಅನುಕ್ರಮ ಸಂಖ್ಯೆ.753, ಹರಿಜನ ಕೇರಿ ಆಸ್ತಿ ನಂಬರಃ 651 ರಲ್ಲಿಯ ಪ್ಲಾಟ್ ನ ವಿಸ್ತೀರ್ಣ 36X25ರ ಆಸ್ತಿಯನ್ನು ಸಭೆ ನಂಬರಃ 15, ಠರಾವು ನಂಬರಃ98, ವಿ.ನಂಬರಃ 5, ಕ್ರಮ ಸಂಖ್ಯೆ.3 ರ ಪ್ರಕಾರ ದಿನಾಂಕಃ 29.11.2006 ರ ಸಭೆ ನಂಬರಃ3, ವಿ.ನಂಬರಃ8, ಕ್ರಮ ಸಂಖ್ಯೆ.1 ರ ಪ್ರಕಾರ 24.09.2008 ರಂದು ದುರಗವ್ವ ಮರಿಯಪ್ಪ ಮಾದರರವರ ಹೆಸರಿಗೆ ಖಾತೆ ಮಾಡಲಾಗಿದೆ ಎಂದು ನಮೂದು ಇರುತ್ತದೆ.

ನಿಪಿ.2 ದಾಖಲೆಯು ದಾವಾ ಆಸ್ತಿಯ 2023-2024 ರ ಖಾತಾ ಉತಾರ ಇದ್ದು, ಸದರಿ ದಾಖಲೆಯಲ್ಲಿಯೂ ಸಹಾ ನಿಪಿ.1 ದಾಖಲೆಯಲ್ಲಿ ನಮೂದಿಸಿರುವ ಎಲ್ಲಾ ಸಂಗತಿಗಳು ಈ ದಾಖಲೆಯಲ್ಲಿ ನಮೂದು ಇರುತ್ತವೆಂದು ಕಂಡು ಬಂದಿರುತ್ತದೆ.

21. ವಾದಿಗಳು ಹಾಜರುಪಡಿಸಿರುವ ನಿಪಿ.3 ದಾಖಲೆಯು ಕಾರ್ಯದರ್ಶಿ ಗ್ರಾಮ ಪಂಚಾಯತ ಶಾಂತಗೇರಿರವರು ದಿನಾಂಕಃ 24.09.2008 ರಂದು ವಿ.ಪಿ.ಸಿ.ನಂಬರಃ 651 ರ ನಕಾಶೆ ಇದ್ದು, ಸದರಿ ದಾಖಲೆಯನ್ನು ಪರಿಶೀಲಿಸಲಾಗಿ ವಿ.ಪಿ.ಸಿ.ನಂಬರಃ 651 ರಲ್ಲಿ ವಿಸ್ತೀರ್ಣ ಪೂರ್ವ -ಪಶ್ಚಿಮ 25 ಅಡಿ ಉತ್ತರ-ದಕ್ಷಿಣ 36 ಅಡಿ ರಸ್ತೆ ಇದ್ದು, ಅದರ ಚಕ್ಕಬಂದಿ ಪೂರ್ವಕ್ಕೆಃ ಸರ್ಕಾರಿ ರಸ್ತೆ, ಪಶ್ಚಿಮಕ್ಕೆಃ ಸರ್ಕಾರಿ ರಸ್ತೆ, ಉತ್ತರಕ್ಕೆಃ ಶ್ರೀ ಚಾಳಮ್ಮ ದೇವಿ ದೇವಸ್ಥಾನ, ದಕ್ಷಿಣಕ್ಕೆಃ ಸರ್ಕಾರಿ ರಸ್ತೆ ಎಂದು ಇರುತ್ತದೆ. ನಿಪಿ.4 ದಾಖಲೆಯು ದಿನಾಂಕಃ 15.06.2018 ರಂದು 1ನೇ ವಾದಿಯು ಶಾಂತಗೇರಿ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ನೀಡಿದ ಅರ್ಜಿ ಇದ್ದು, ಸದರಿ ದಾಖಲೆಯನ್ನು ಪರಿಶೀಲಿಸಲಾಗಿ ಅನುಕ್ರಮ ಸಂಖ್ಯೆ.753, ಆಸ್ತಿ ಸಂಖ್ಯೆ.651 ರಲ್ಲಿ ಅಕ್ರಮ ಮತ್ತು ದಬ್ಬಾಳಿಕೆ ಕುರಿತು ಎಂದು ವಿಷಯ ಇದ್ದು, 2ನೇ ಪ್ರತಿವಾದಿಯು ದಾವಾ ಆಸ್ತಿಯಲ್ಲಿ ನನ್ನದು ಇರುತ್ತದೆಂದು ಕಿರುಕುಳ ನೀಡುತ್ತಿದ್ದು, ಆ ಬಗ್ಗೆ ಕ್ರಮವಹಿಸಿ ಅಳತೆ ಮಾಡಿಕೊಡಬೇಕೆಂದು ಅರ್ಜಿಯನ್ನು ಸಲ್ಲಿಸಿದ್ದರೆಂದು ಕಂಡು ಬಂದಿರುತ್ತದೆ.

22. ವಾದಿಗಳು ಹಾಜರುಪಡಿಸಿರುವ ನಿಪಿ.5 ದಾಖಲೆಯು ದಿನಾಂಕಃ 05.01.2023 ರಂದು ಪುನಃ ವಿ.ಪಿ.ಸಿ ನಂಬರಃ 651 ರಲ್ಲಿ 2 ನೇ ಪ್ರತಿವಾದಿ, 1 ನೇ ಪ್ರತಿವಾದಿ ಶೌಚಾಲಯ ಕಾಮಗಾರಿ ಮಾಡುತ್ತಿದ್ದು, ದಾಖಲೆಗಳನ್ನು ಪರಿಶೀಲಿಸಿ ಕ್ರಮವಹಿಸಬೇಕೆಂದು ತಕರಾರು ಅರ್ಜಿಯನ್ನು ಸಲ್ಲಿಸಿದ್ದರೆಂದು ಈ ದಾಖಲೆಯಿಂದ ಕಂಡು ಬಂದಿರುತ್ತದೆ. ನಿಪಿ.6 ದಾಖಲೆಯು ದಿನಾಂಕಃ 07.07.2018 ರಂದು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಶಾಂತಗೇರಿರವರು ವಿ.ಪಿ.ಸಿ ನಂಬರಃ 651 ಕ್ಕೆ ಸಂಬಂಧಿಸಿದಂತೆ ನೀಡಿರುವ ದೃಢೀಕರಣ ಪತ್ರ ಇದ್ದು, ಆ ದಾಖಲೆಯನ್ನು ಪರಿಶೀಲಿಸಲಾಗಿ ಶಾಂತಗೇರಿ

ಗ್ರಾಮದ ವಿ.ಪಿ.ಸಿ ನಂಬರಃ 651 ದುರಗವ್ವ ಮರಿಯಪ್ಪ ಮಾದರ ಇವರ ಹೆಸರಿನಲ್ಲಿ ಇದ್ದು, ಈ ಆಸ್ತಿಯನ್ನು ಸಭೆ ನಂಬರಃ15, ಠರಾವು ಸಂಖ್ಯೆ.98, ವಿಷಯ ನಂಬರಃ5, ಕ್ರಮ ಸಂಖ್ಯೆ.3 ರ ಪ್ರಕಾರ ದಿನಾಂಕಃ 29.11.2006 ರಂತೆ ದಾಖಲು ಆಗಿದೆ, ಅದಕ್ಕೆ ಕಾರ್ಯದರ್ಶಿ ಮತ್ತು ಅಧ್ಯಕ್ಷರು ಶಾಂತಗೇರಿರವರು ಸಹಿ ಮಾಡಿರುತ್ತಾರೆಂದು ನಮೂದು ಇರುತ್ತದೆ.

23. ವಾದಿಗಳು ಹಾಜರುಪಡಿಸಿರುವ ನಿಪಿ.7 ದಾಖಲೆಯು ವಾದಿಗಳ ಕುಟುಂಬದ ಪಡಿತರ ಚೀಟಿ ಇದ್ದು, ಅದರಲ್ಲಿ ಪ್ರತಿವಾದಿ 1 ಮತ್ತು ಆತನ ಹೆಂಡತಿ ಮಕ್ಕಳ ಹೆಸರು ನಮೂದು ಇರುತ್ತದೆ. ಈ ದಾಖಲೆಯಲ್ಲಿ ದಾವಾ ಆಸ್ತಿಗೆ ಸಂಬಂಧಿಸಿದಂತೆ ಯಾವುದೇ ನಮೂದುಗಳು ಇರುವುದಿಲ್ಲ. ನಿಪಿ.8 ದಾಖಲೆಯು ದುರಗವ್ವರವರ ಮರಣ ಪ್ರಮಾಣ ಪತ್ರ ಇದ್ದು, ಸದರಿ ದಾಖಲೆಯನ್ನು ಪರಿಶೀಲಿಸಲಾಗಿ ದುರಗವ್ವರವರು ದಿನಾಂಕಃ 10.06.2013 ರಂದು ಶಾಂತಗೇರಿಯಲ್ಲಿ ಮರಣಹೊಂದಿರುತ್ತಾರೆಂದು ಕಂಡು ಬಂದಿರುತ್ತದೆ. ನಿಪಿ.9 ರಿಂದ 14 ದಾಖಲೆಗಳು ಫೋಟೋಗಳು, ಮೆಮೋರಿ ಕಾರ್ಡ್, ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 65(ಡಿ) ರಡಿಯಲ್ಲಿ ಸಲ್ಲಿಸಿದ ಸರ್ಟಿಫಿಕೇಟ್ ಇರುತ್ತದೆ. ಈ ದಾಖಲೆಗಳನ್ನು ಪರಿಶೀಲಿಸಲಾಗಿ ದಾವಾ ಆಸ್ತಿಯಲ್ಲಿ ಶೌಚಾಲಯವನ್ನು ನಿರ್ಮಾಣಮಾಡಿರುತ್ತಾರೆಂದು ಕಂಡು ಬಂದಿರುತ್ತದೆ.

24. ಈ ದಾವೆಯಲ್ಲಿ ಪ್ರತಿವಾದಿಗಳು ಹಾಜರುಪಡಿಸಿರುವ ನಿಡಿ.1 ದಾಖಲೆಯು 2001-2002 ನೇ ಸಾಲಿನ ಗ್ರಾಮ ಪಂಚಾಯತಿ ಮನೆ ಮತ್ತು ಭೂಮಿ ಆಕರಣೆ ಯಾದಿಯ ದೃಢೀಕೃತ ನಕಲು ಇದ್ದು, ಸದರಿ ದಾಖಲೆಯನ್ನು ಪರಿಶೀಲಿಸಲಾಗಿ ಆಸ್ತಿ ಸಂಖ್ಯೆ.651 ರಲ್ಲಿ ವಿಸ್ತೀರ್ಣ 36X25 ಅಡಿ ಆಸ್ತಿಯು ದುರಗವ್ವ ಮುರಿಗೆಪ್ಪ ಮಾದರ ಇವರಿಗೆ ಸಭೆ ನಂಬರಃ15, ಠರಾವು ನಂಬರಃ 98, ವಿ.ನಂಬರಃ 5, ಕ್ರಮ ಸಂಖ್ಯೆ.3 ದಿನಾಂಕಃ 29.11.2006 ರ ಪ್ರಕಾರ ಅವರ ಹೆಸರಿಗೆ ದಾಖಲಾಗಿರುವ ಬಗ್ಗೆ ನಮೂದು ಇರುತ್ತದೆ. ನಿಡಿ.2 ದಾಖಲೆಯು ಠರಾವು ಪುಸ್ತಕದ ದೃಢೀಕೃತ ನಕಲು ಇದ್ದು, ಸದರಿ ದಾಖಲೆಯನ್ನು ಸಭೆ ನಂಬರಃ 15 ದಿನಾಂಕಃ 29.11.2006 ರಂದು ಠರಾವು

ನಂಬರಃ 98, ವಿ.ನಂಬರಃ 5, ಕ್ರಮ ಸಂಖ್ಯೆ.3 ರನ್ನು ಪರಿಶೀಲಿಸಲಾಗಿ ಶಾಂತಗೇರಿ ಗ್ರಾಮದ ಶ್ರೀ ಕೂಡ್ಲೆಪ್ಪ ಪಡಿಯಪ್ಪ ಜಾಲಿಹಾಳ ಇವರು ಬರೆದು ಕೇಳಿಕೊಂಡ ಕಟ್ಟಡ ಪರವಾನಿಗೆ ಅರ್ಜಿಯನ್ನು ಸಭೆಯಲ್ಲಿ ಓದಲಾಗಿ ಸದರಿಯವರ ಅರ್ಜಿಯ ಮಾಹಿತಿಯ ಪ್ರಕಾರ ಈ ಹಿಂದೆ ಕಟ್ಟಡ ಪರವಾನಿಗೆ ಕುರಿತು ಜೆ.ಎಂ.ಎಫ್.ಸಿ ಕೋರ್ಟ್ ನಲ್ಲಿ ದಾವೆ ಹೂಡಿದ್ದು, ಆ ಬಗ್ಗೆ ಮಾಹಿತಿ ಕೇಳಲಾಗಿ ಅವರು ದಾವೆಯನ್ನು ರಾಜಿ ಮಾಡಿಕೊಂಡಿದ್ದನ್ನು ಪರಿಶೀಲಿಸಲಾಗಿ ಮತ್ತು ಈವರೆಗೆ ಪರವಾನಿಗೆ ಕುರಿತು ಯಾವುದೇ ತಂಟೇ ತಕರಾರು ಬಾರದೆ ಇರುವುದನ್ನು ಪರಿಶೀಲಿಸಿ ಕಟ್ಟಡ ಪರವಾನಿಗೆ ಕೊಡಲು ಅಡ್ಡಿ ಇರುವುದಿಲ್ಲವೆಂದು ಠರಾವು ಪಾಸು ಮಾಡಲಾಗಿರುತ್ತದೆಂದು ನಮೂದು ಇರುತ್ತದೆ.

25. ಪ್ರತಿವಾದಿಗಳು ಹಾಜರುಪಡಿಸಿರುವ ನಿಡಿ.3 ದಾಖಲೆಯು ಸಭೆ ನಂಬರಃ15 ದಿನಾಂಕಃ 29.11.2006 ರ ದೃಢೀಕೃತ ನಕಲು ಇದ್ದು, ಸದರಿ ದಾಖಲೆಯನ್ನು ಪರಿಶೀಲಿಸಲಾಗಿ ಠರಾವು ನಂಬರಃ 98, ವಿ.ನಂಬರಃ5 ರಲ್ಲಿ ಸಾರ್ವಜನಿಕರಿಂದ ಬಂದ ಅರ್ಜಿಗಳ ವಿಚಾರ ಮತ್ತು ಕ್ರಮ ಸಂಖ್ಯೆ.3 ರಲ್ಲಿ ನಿಡಿ.2 ರಲ್ಲಿ ನಮೂದು ಇರುವಂತೆ ಈ ದಾಖಲೆಯಲ್ಲಿಯೂ ಸಹಾ ನಮೂದು ಇರುತ್ತದೆ. ನಿಡಿ.4 ದಾಖಲೆಯು ನಿಡಿ.1ರ ಯಥಾಪ್ರತಿಯಾಗಿರುತ್ತದೆ ನಿಡಿ.5 ದಾಖಲೆಯು ಶಾಂತಗೇರಿ ಗ್ರಾಮ ಪಂಚಾಯತಿಯ ಪ್ರೊಸಿಡಿಂಗ್ಸ್ ಬುಕ್ಕಿನ ದೃಢೀಕೃತ ನಕಲು ಇದ್ದು, ಸದರಿ ದಾಖಲೆಯನ್ನು ಪರಿಶೀಲಿಸಲಾಗಿ ದಿನಾಂಕಃ 12.12.2012 ರಂದು ಗ್ರಾಮ ಪಂಚಾಯತಿ ಸಭೆಯಲ್ಲಿ ಇದ್ದ ಅಧ್ಯಕ್ಷರು, ಉಪಾಧ್ಯಾಕ್ಷರು ಹಾಗೂ ಸದಸ್ಯರು ಮಾಡಿರುವ ಠರಾವು ಇದ್ದು, ಸದರಿ ದಾಖಲೆಯಲ್ಲಿ ಹನುಮವ್ವ ಕೋಂ ಬಸಪ್ಪ ಮಾದರ, ಶಾಂತಗೇರಿ ಇವರಿಗೆ ಠರಾವು ನಂಬರಃ 41 ರ ಪ್ರಕಾರ ಅರ್ಜಿ ವಿಚಾರಿಸಲಾಗಿ ಶಾಂತಗೇರಿ ಗ್ರಾಮದಲ್ಲಿ ತಿಪ್ಪೆ ಜಾಗವನ್ನು ದಾಖಲಿಸಲು ಅರ್ಜಿ ಮಾಡಿಕೊಂಡ ಪ್ರಯುಕ್ತ ಸದರಿಯವರ ಅರ್ಜಿಯನ್ನು ಪರಿಶೀಲಿಸಿ ಜಾಗವನ್ನು ಅವರ ಹೆಸರಿಗೆ ದಾಖಲು ಮಾಡಿದ್ದು, ಅದರ ಚಕ್ಕಬಂದಿ ಪೂರ್ವಕ್ಕೆಃ ರಸ್ತೆ, ಪಶ್ಚಿಮಕ್ಕೆಃ

ದುರಗವ್ವ ಮಾದರ, ಉತ್ತರಕ್ಕೆಃ ಚಾಳವ್ವನ ಗುಡಿ, ದಕ್ಷಿಣಕ್ಕೆಃ ರಸ್ತೆ ಎಂದು ದಾಖಲು ಮಾಡಲು ಠರಾವು ಮಾಡಿರುವುದಾಗಿ ನಮೂದು ಇರುತ್ತದೆ.

26. ಪ್ರತಿವಾದಿಗಳು ಹಾಜರುಪಡಿಸಿರುವ ನಿಡಿ.6 ದಾಖಲೆಯು ಪ್ರತಿವಾದಿಗಳ ಆಸ್ತಿ ಸಂಖ್ಯೆ.721 ರ ಖಾತಾ ಉತಾರದ ದೃಢೀಕೃತ ನಕಲು ಇದ್ದು, ಆಸ್ತಿ ಸಂಖ್ಯೆ.721 ರಲ್ಲಿಯ ಪ್ಲಾಟ ವಿಸ್ತೀರ್ಣ 2822 ಹನಮವ್ವ ಬಸಪ್ಪ ಮಾದರವರ ಹೆಸರಿಗೆ ದಿನಾಂಕಃ 12.12.2012 ರಂದು ಮಾಡಿದ ಠರಾವು ನಂಬರಃ 41 ರ ಪ್ರಕಾರ ಅವರ ಹೆಸರಿಗೆ ದಾಖಲು ಮಾಡಿರುತ್ತಾರೆಂದು ಕಂಡು ಬಂದಿರುತ್ತದೆ. ನಿಡಿ.7 ದಾಖಲೆಯು ಪ್ರತಿವಾದಿಗಳ ಆಸ್ತಿಯ ಖಾತಾ ಉತಾರ ಇದ್ದು, ಅದರಲ್ಲಿಯೂ ಸಹಾ ನಿಡಿ.6 ರಲ್ಲಿ ಇರುವ ಸಂಗತಿಗಳು ನಮೂದು ಇರುತ್ತದೆ.

27. ಪ್ರತಿವಾದಿಗಳು ಹಾಜರುಪಡಿಸಿರುವ ನಿಡಿ.8 ದಾಖಲೆಯು ದಿನಾಂಕಃ 18.05.2018 ರಂದು ಗ್ರಾಮ ಪಂಚಾಯತ ಶಾಂತಗೇರಿರವರು ನೀಡಿರುವ ನಕಾಶೆ ಇದ್ದು, ಸದರಿ ದಾಖಲೆಯನ್ನು ಪರಿಶೀಲಿಸಲಾಗಿ ಪ್ರತಿವಾದಿಗಳ ಆಸ್ತಿಯ ವಿ.ಪಿ.ಸಿ ನಂಬರಃ 721 ಎಂದು ಇದ್ದು, ಅದರ ವಿಸ್ತೀರ್ಣ ಪೂರ್ವ-ಪಶ್ಚಿಮ 18 ಅಡಿ ಉತ್ತರ-ದಕ್ಷಿಣ 20 ಅಡಿ ಇದ್ದು, ಚಕ್ಕಬಂದಿ ಪೂರ್ವಕ್ಕೆಃ ರಸ್ತೆ, ಪಶ್ಚಿಮಕ್ಕೆಃ ಮರಿಯಪ್ಪ ಚಾಳಪ್ಪ ಹುಣಸಿಮರದ ಇವರ ಮನೆ, ಉತ್ತರಕ್ಕೆಃ ಚಾಳಮ್ಮನ ದೇವಸ್ಥಾನ, ದಕ್ಷಿಣಕ್ಕೆಃ ಸಿಸಿ ರಸ್ತೆ ಎಂದು ಇರುತ್ತದೆ. ನಿಪಿ.9 ದಾಖಲೆಯು ದಿನಾಂಕಃ 05.01.2023 ರಂದು ಶಾಂತಗೇರಿ ಗ್ರಾಮ ಪಂಚಾಯತಿಯವರು ನೀಡಿರುವ ನಕಾಶೆ ಇದ್ದು, ಸದರಿ ದಾಖಲೆಯನ್ನು ಪರಿಶೀಲಿಸಲಾಗಿ ವಿ.ಪಿ.ಸಿ ನಂಬರಃ 721 ರಲ್ಲಿ ವಿಸ್ತೀರ್ಣ ಪೂರ್ವ-ಪಶ್ಚಿಮ 18 ಅಡಿ ಉತ್ತರ-ದಕ್ಷಿಣ 20 ಅಡಿ ಇದ್ದು, ಅದರ ಚಕ್ಕಬಂದಿ ಪೂರ್ವಕ್ಕೆಃ ರಸ್ತೆ, ಪಶ್ಚಿಮಕ್ಕೆಃ ದುರಗವ್ವ ಮರಿಯಪ್ಪ ಮಾದರ ಇವರ ಮನೆ, ಉತ್ತರಕ್ಕೆಃ ಚಾಳಮ್ಮ ದೇವಿ ಗುಡಿ, ದಕ್ಷಿಣಕ್ಕೆಃ ಸಿಸಿ ರಸ್ತೆ, ಇರುತ್ತದೆಂದು ಕಂಡು ಬಂದಿರುತ್ತದೆ, ನಿಪಿ.10 ದಾಖಲೆಯು ನಿಡಿ.5 ರ ಯಥಾ ಪ್ರತಿಯಾಗಿರುತ್ತದೆ. ನಿಡಿ.12 ದಾಖಲೆಯು ಶಾಂತಗೇರಿ ಗ್ರಾಮ ಪಂಚಾಯತಿ ಕಾರ್ಯಾಲಯದವರು ನೀಡಿರುವ ಸ್ಥಾನಿಕ ವರದಿ ಇದ್ದು, ಸದರಿ

ದಾಖಲೆಯನ್ನು ಪರಿಶೀಲಿಸಲಾಗಿ ಶಾಂತಗೇರಿ ಗ್ರಾಮದ ಆಸ್ತಿ ನಂಬರಃ 651 ಮತ್ತು 721 ರ ಆಸ್ತಿಗಳಿಗೆ ಸಂಬಂಧಿಸಿದಂತೆ ಸ್ಥಾನಿಕ ಪರೀಕ್ಷೆ ನಡೆಸಿದಾಗ ಆಸ್ತಿ ನಂಬರಃ 651 ಮೃತ ದುರಗವ್ವ ಮರಿಯಪ್ಪ ಮಾದರರವರ ಹೆಸರಿನಲ್ಲಿ ಇದ್ದು, ಆಸ್ತಿ ನಂಬರಃ 721 ಹನಮವ್ವ ಬಸಪ್ಪ ಮಾದರ ಇವರ ಹೆಸರಿನಲ್ಲಿ ಇದ್ದು, ಆಸ್ತಿ ಸಂಖ್ಯೆ.721 ರ ಮಾಲೀಕರು ಶೌಚಾಲಯ ಕಾಮಗಾರಿಯನ್ನು ಪ್ರಾರಂಭಿಸಿದಾಗ ಆಸ್ತಿ ಸಂಖ್ಯೆ.651 ರ ಮಾಲೀಕರು ಶೌಚಾಲಯವನ್ನು ಕಟ್ಟಲು ತಕರಾರು ಮಾಡಿದ್ದು, ಊರಿನ ಪ್ರಮುಖರು ಹಾಗೂ ಸಾರ್ವಜನಿಕರು ಹಾಗೂ ವಾರ್ಡ್ ನ ಸದಸ್ಯರು ಸ್ಥಳಕ್ಕೆ ಹೋಗಿ ಪರಿಶೀಲಿಸಿ ಯಥಾಸ್ಥಿತಿ ಕಾಪಾಡುವಂತೆ ಹಾಜರು ಇದ್ದು ತಿಳಿಸಿದ್ದರು ಎಂದು ಈ ದಾಖಲೆಯಿಂದ ಕಂಡು ಬಂದಿರುತ್ತದೆ.

28. ಈ ದಾವೆಯಲ್ಲಿ ವಿಚಾರಣೆಗೊಳಗಾಗಿ ಪಿ.ಡಬ್ಲ್ಯೂ.1 ರವರಿಗೆ ಪ್ರತಿವಾದಿಗಳ ಪರ ವಕೀಲರು ಪಾಟೀ ಸವಾಲು ಮಾಡಿದ್ದು, ತಮ್ಮ ಪಾಟೀ ಸವಾಲಿನಲ್ಲಿ ದಾವಾ ಆಸ್ತಿಯಲ್ಲಿ ತಮ್ಮ ತಂದೆಯ ಕಾಲದಿಂದಲೂ ವಹಿವಾಟು ಮಾಡುತ್ತಾ ಬಂದಿರುತ್ತೇವೆ ಯಾವ ಇಸ್ವಿಯಿಂದ ಎಂದು ಹೇಳಲು ಬರುವುದಿಲ್ಲ. ದಾವಾ ಆಸ್ತಿಯು ನಮಗೆ ಅಜ್ಜನ ತಾಯಿ ದುರಗವ್ವರವರು ದೇವದಾಸಿಯಾಗಿದ್ದರು, ಅವರಿಗೆ ಗ್ರಾಮ ಪಂಚಾಯತಿಯಿಂದ ನೀಡಲ್ಪಟ್ಟ ಆಸ್ತಿಯಾಗಿರುತ್ತದೆ. ಅವರಿಗೆ ಆಸ್ತಿಯನ್ನು ನೀಡಬೇಕೆಂದು ಸರ್ಕಾರದ ಆದೇಶ ಬಂದಿತ್ತೋ ಇಲ್ಲವೋ, ಆ ಯೋಜನೆ ಅಡಿ ಫಲಾನುಭವಿಯಾಗಿ ದುರಗವ್ವರವರು ಅರ್ಜಿಯನ್ನು ಸಲ್ಲಿಸಿದ್ದರೋ ಇಲ್ಲವೋ ಮಾಹಿತಿ ಇಲ್ಲ, ಅರ್ಜಿಯನ್ನು ಸಲ್ಲಿಸಿದರೆ ಮಾತ್ರ ಆ ಯೋಜನೆ ಅಡಿಯಲ್ಲಿ ಆಸ್ತಿಯನ್ನು ಮಂಜೂರು ಮಾಡುತ್ತಾರೆ ಎಂದರೆ ಸರಿ. ಆ ಬಗ್ಗೆ ದಾಖಲು ಹಾಜರುಪಡಿಸಿಲ್ಲ. ಪಂಚಾಯತಿಯವರು ಉತಾರವನ್ನು ಕೊಡುವಾಗ ಕ್ರಮವಹಿಸಿ ಕೊಡುತ್ತಾರೆ ಎಂದರೆ ಸರಿ. ಅದರಲ್ಲಿ ಠರಾವು, ದಿನಾಂಕ, ವರದಿ ಸಂಖ್ಯೆ, ಎಲ್ಲಾ ನಮೂದು ಮಾಡಿ ಕೊಡುತ್ತಾರೆ ಎಂದರೆ ಸರಿ.

29. ಈ ಸಾಕ್ಷಿದಾರರು ತಮ್ಮ ಪಾಟೀ ಸವಾಲಿನಲ್ಲಿ ಮುಂದುವರೆದು, ಗ್ರಾಮ ಪಂಚಾಯತಿ ಸರ್ವೇ ನಂಬರಃ 15, ಠರಾವು ಸಂಖ್ಯೆ.98, ವಿ.ನಂಬರಃ 5,

ಕ್ರಮ ಸಂಖ್ಯೆ.3 ರಂತೆ ದಿನಾಂಕಃ 29.11.2006 ರ ಪ್ರಕಾರ ನಮಗೆ ಆಸ್ತಿಯ ಖಾತೆಯಾಗಿರುತ್ತದೆ. ನಿಡಿ.2 ರ ಪ್ರಕಾರ ದಿನಾಂಕಃ 29.11.2006 ರಂದು ಸಭೆ ನಂಬರಃ 15, ಠರಾವು ಸಂಖ್ಯೆ.98 ರ ಪ್ರಕಾರ ನಮಗೆ ಖಾತೆಯಾಗಿರುತ್ತದೆ. ಠರಾವಿನಲ್ಲಿ ಚಕ್ಕಬಂದಿ ಮತ್ತು ವಿಸ್ತೀರ್ಣವನ್ನು ನಮೂದಿಸಿರುವುದಿಲ್ಲ. ಠರಾವು ಪ್ರಕಾರ ಹನಮವ್ವರವರ ಹೆಸರನ್ನು ವಿ.ಪಿ.ಸಿ ನಂಬರಃ 721 ರಲ್ಲಿ ನಮೂದು ಮಾಡಿ ಅವರಿಗೆ ಉತಾರವನ್ನು ಕೊಟ್ಟಿರುತ್ತಾರೆಂದರೆ ಸಾಕ್ಷಿಯು ನಮ್ಮ ಆಸ್ತಿಯನ್ನು ಒತ್ತುವರಿ ಮಾಡಿರುತ್ತಾರೆಂದು ನುಡಿಯುತ್ತಾರೆಂದು ಒಪ್ಪಿಕೊಂಡು ಇತರ ಸಂಗತಿಗಳನ್ನು ಅಲ್ಲಗಳೆದಿರುತ್ತಾರೆ.

30. ಈ ದಾವೆಯಲ್ಲಿ ವಾದಿ 4 ರವರು ಸ್ವತಃ ಪಿ.ಡಬ್ಲ್ಯೂ.2 ಎಂದು ವಿಚಾರಣೆಗೊಳಗಾಗಿದ್ದು ಅವರು ತಮ್ಮ ಸಾಕ್ಷ್ಯದಲ್ಲಿ ವಾದಪತ್ರದ ಸಂಗತಿಗಳನ್ನು ಪುನರುಚ್ಚರಿಸಿರುತ್ತಾರೆ. ಅವರಿಗೆ ಪ್ರತಿವಾದಿಗಳ ಪರ ವಕೀಲರು ಪಾಟೀ ಸವಾಲು ಮಾಡಿದ್ದು, ಪಾಟೀ ಸವಾಲಿನಲ್ಲಿ ಆಸ್ತಿ ಸಂಖ್ಯೆ.651 ನನ್ನ ಅಜ್ಜಿ ದುರಗಮ್ಮರವರಿಂದ ನಮ್ಮ ತಂದೆಗೆ ಬಂದಿರುತ್ತದೆ. ಪ್ರಸ್ತುತ ನನ್ನ ತಾಯಿ ದುರಗವ್ವರವರ ಹೆಸರಿನಲ್ಲಿ ಇದೆ, ನನ್ನ ಅಜ್ಜಿ ದುರಗವ್ವ ದೇವದಾಸಿಯಾಗಿದ್ದು, ಅವಳ ಹೆಸರಿಗೆ ಖಾಲಿ ಜಾಗವನ್ನು ನೀಡಿದ್ದು, ಅವರ ಹೆಸರಿಗೆ ನೀಡಿರುತ್ತಾರೆ. ನನ್ನ ಅಜ್ಜಿಗೆ ಗ್ರಾಮ ಪಂಚಾಯತಿಯಿಂದ ಯಾವುದೇ ಜಾಗವನ್ನು ಮಂಜೂರು ಮಾಡಿಲ್ಲ. ನನ್ನ ತಾಯಿಯು ಸಹಾ ಗ್ರಾಮ ಪಂಚಾಯತಿಗೆ ಮಂಜೂರು ಮಾಡಬೇಕೆಂದು ಅರ್ಜಿ ನೀಡಿಲ್ಲ. ನನ್ನ ತಾಯಿಯ ಹೆಸರಿಗೆ 2006 ರಲ್ಲಿ ನಮೂದು ಮಾಡಿದ್ದಾರೆ. ದಾವಾ ಸ್ವತ್ತನ್ನು ಪಂಚಾಯತಿಯವರು ಅಳತೆ ಮಾಡಿದ್ದಾರೆ ನಮ್ಮ ಸ್ವತ್ತಿನ ಪೂರ್ವಕ್ಕೆಃ ಹನಮವ್ವ ಬಸಪ್ಪ ಮಾದರವರ ಖಾಲಿ ಜಾಗ ಇರುತ್ತದೆ ಎಂದರೆ ಸರಿ. ಆ ರೀತಿ ಸರ್ಕಾರದ ಯೋಜನೆ ಇತ್ತು ಅದರ ಅಡಿ ದಾವಾ ಆಸ್ತಿ ಬಂದಿರುತ್ತದೆಂದು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿಲ್ಲ. ನಿಪಿ.1 ಮತ್ತು 2 ದಾಖಲೆಗಳಲ್ಲಿ ನಮೂದಿಸಿರುವ ನಮೂದುಗಳಂತೆ ನನ್ನ ಅಜ್ಜಿಗೆ ಆಸ್ತಿ ಬಂದಿರುತ್ತದೆಂದರೆ ಸರಿ. ಸಭೆ ನಂಬರಃ 6 , ಠರಾವು ಸಂಖ್ಯೆ.41 ರ ಪ್ರಕಾರ ಹನಮವ್ವ ಕೋಂ ಬಸಪ್ಪ ಮಾದರ ಇವರ

ಹೆಸರಿಗೆ ಖಾತೆ ಮಾಡಲು ಆದೇಶವಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಉತಾರಗಳಲ್ಲಿ ಅಳತೆಯನ್ನು ನಮೂದು ಮಾಡಿರುವುದಕ್ಕೆ ಸಂಬಂಧಿಸಿದಂತೆ ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲೆಯನ್ನು ಬಿಟ್ಟು ಬೇರೆ ದಾಖಲೆಗಳು ಇಲ್ಲ. ದಾವಾ ಆಸ್ತಿಯು ನಮಗೆ ಸೇರಿದ್ದು ಎಂದು ತೋರಿಸಲು ಠರಾವು ಸಹಾ ಇರುತ್ತದೆ ಎಂದು ಒಪ್ಪಿಕೊಂಡಿರುತ್ತಾರೆ.

31. ಈ ದಾವೆಯಲ್ಲಿ ವಿಚಾರಣೆಗೊಳಗಾಗಿರುವ ಡಿ.ಡಬ್ಲ್ಯೂ.1 ರವರಿಗೆ ವಾದಿಗಳ ಪರ ವಕೀಲರು ಪಾಟೀ ಸವಾಲು ಮಾಡಿದ್ದು ಪಾಟೀ ಸವಾಲಿನಲ್ಲಿ ಯಾವುದೇ ಆಸ್ತಿಗೆ ಮಾಲೀಕ ಎಂದು ಆಸ್ತಿ ಉತಾರ ನೋಡಿದರೆ ಗೊತ್ತಾಗುತ್ತದೆ. ನಿಪಿ.2 ರಲ್ಲಿ ಮಾಲೀಕರ ಕಾಲಂನಲ್ಲಿ ದುರಗವ್ವ ಮರಿಯಪ್ಪ ಮಾದರ ಎಂದು ನಮೂದು ಇರುತ್ತದೆ ಎಂದರೆ ಸರಿ. ನಿಪಿ.3 ರಲ್ಲಿ ನಮೂದಿಸಿರುವ ಚಕ್ಕಬಂದಿಯಲ್ಲಿ ದುರಗವ್ವ ಮಾದರರವರ ಆಸ್ತಿ ಇರುತ್ತದೆಂದು ಪಂಚಾಯತಿಯವರು ದಾಖಲೆ ಕೊಟ್ಟಿರುತ್ತಾರೆ ಎಂದರೆ ಸರಿ. ನಿಪಿ.2 ರಲ್ಲಿ ಆಸ್ತಿಯ ವಿಸ್ತೀರ್ಣ 36X25 ಅಡಿ ಇರುತ್ತದೆಂದು ನಮೂದು ಇರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಮ್ಮ ಜಾಗವನ್ನು ಸೇರಿಸಿ ವಿಸ್ತೀರ್ಣವನ್ನು ವಾದಿಗಳು ಬರೆಸಿಕೊಂಡಿರುತ್ತಾರೆಂದು ನುಡಿಯುತ್ತಾರೆ. ನಾನು ಆಸ್ತಿ ನಂಬರಃ 721 ರ ಉತಾರವನ್ನು ಹಾಜರುಪಡಿಸಿರುತ್ತೇನೆ. ಸದರಿ ಆಸ್ತಿಯನ್ನು ಗ್ರಾಮ ಪಂಚಾಯತಿಯಿಂದ ನನ್ನ ಅಜ್ಜಿಗೆ ಕೊಟ್ಟಿರುತ್ತಾರೆ. ಸದರಿ ಆಸ್ತಿಯಲ್ಲಿ ನಮ್ಮ ಅಜ್ಜಿಯಂದಿರ ಕಾಲದಿಂದ ವಹಿವಾಟು ಮಾಡುತ್ತಾ ಬಂದಿದ್ದರಿಂದ ಕೊಟ್ಟಿರುತ್ತಾರೆ. 2-3 ತಲೆಮಾರಿನಿಂದ ಆ ಆಸ್ತಿಯಲ್ಲಿ ವಹಿವಾಟು ಮಾಡಿಕೊಂಡಿದ್ದರು. ಸದರಿ 18X20 ಅಡಿ ಆಸ್ತಿಯಲ್ಲಿ ವಹಿವಾಟು ಮಾಡಿಕೊಂಡು ಬಂದಿರುತ್ತೇವೆ ನಮಗೆ ಕೊಡಿ ಎಂದು ಪಂಚಾಯತಿಗೆ ಅರ್ಜಿಯನ್ನು ಕೊಟ್ಟಿರುತ್ತೇವೆ ಆ ರೀತಿ ಅರ್ಜಿಯನ್ನು 2009 ರಲ್ಲಿ ಕೊಟ್ಟಿದ್ದೇವು ಅದರ ನಕಲನ್ನು ಹಾಜರುಪಡಿಸಿಲ್ಲ. 2014 ರಿಂದ ಪಂಚಾಯತಿಯಲ್ಲಿ ಅಟೆಂಡರ್ ಆಗಿ ಕೆಲಸ ಮಾಡುತ್ತಿದ್ದೇನೆ, ಸದರಿ ನಮ್ಮ ಆಸ್ತಿ ವಿಸ್ತೀರ್ಣ 18X20 ಎಂದು ನಾನು ವಹಿವಾಟು ಆಧರಿಸಿ ಕೇಳಿರುತ್ತೇನೆ.

ಅಳತೆ ಬಗ್ಗೆ ಸರ್ಕಾರಿ ಅಧಿಕಾರಿಗಳು ಬಂದು ಅಳತೆ ಮಾಡಿ ಇಷ್ಟೇ ಇರುತ್ತದೆಂದು ದಾಖಲೆ ಕೊಟ್ಟಿಲ್ಲ.

32. ಈ ಸಾಕ್ಷಿದಾರರು ತಮ್ಮ ಪಾಟೀ ಸವಾಲಿನಲ್ಲಿ ಮುಂದುವರೆದು, ದಾವಾ ಆಸ್ತಿ ಮತ್ತು ನಮ್ಮ ಆಸ್ತಿ ಶಾಂತಗೇರಿ ಪಂಚಾಯತಿ ವ್ಯಾಪ್ತಿಗೆ ಬರುತ್ತದೆ. ಕೈಪಿಯತ್ತಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಅದರಲ್ಲಿ ಬರೆದಿರುವ ಸಂಗತಿಯು ಗೊತ್ತಿದೆ. ನನ್ನ ಕೈಪಿಯತ್ತನ ಪ್ಯಾರಾ ನಂಬರಃ 10 ರಲ್ಲಿ ನಮ್ಮ ಆಸ್ತಿಯ ವಿಸ್ತೀರ್ಣ ಉತ್ತರ-ದಕ್ಷಿಣ 20 ಅಡಿ ಪೂರ್ವ-ಪಶ್ಚಿಮವಾಗಿ 18 ಅಡಿ ಎಂದು ತೋರಿಸಿರುತ್ತೇನೆ ಎಂದರೆ ಸರಿ. ದಾವಾ ಆಸ್ತಿಗೆ ಸಂಬಂಧಿಸಿದಂತೆ ನಿಡಿ.6 ರನ್ನು ಹಾಜರುಪಡಿಸಿರುತ್ತೇನೆ. ಅದರಲ್ಲಿ ವಿಸ್ತೀರ್ಣ 20X22 ಎಂದು ಇದೇ ಎಂದರೆ ಸರಿ. ತಕರಾರಿನಲ್ಲಿ ನಮ್ಮ ಆಸ್ತಿಯ ವಿಸ್ತೀರ್ಣ 20X18 ಎಂದು ವಹಿವಾಟಿನ ಆಧಾರದ ಮೇಲೆ ಹೇಳಿರುತ್ತೇನೆ. ಸದರಿ ಆಸ್ತಿಯು ಅಷ್ಟೇ ವಿಸ್ತೀರ್ಣ ಇರುತ್ತದೆ, ಅದರಲ್ಲಿ ವಹಿವಾಟು ಮಾಡುತ್ತಿದ್ದೇವೆ ಎಂದು ಅಳತೆ ಮಾಡಿಸಿ ದಾಖಲೆಯನ್ನು ಹಾಜರುಪಡಿಸಿಲ್ಲ. ನನಗೆ ನಮ್ಮ ಆಸ್ತಿಯ ವಿಸ್ತೀರ್ಣ ಎಷ್ಟು ಇರುತ್ತದೆಂದು ಗೊತ್ತಿಲ್ಲ ಎಂದರೆ ಸಾಕ್ಷಿಯು ಅಳತೆ ಮಾಡಿಲ್ಲ ಎಂದು ನುಡಿಯುತ್ತಾರೆ.

33. ಈ ಸಾಕ್ಷಿದಾರರು ತಮ್ಮ ಪಾಟೀ ಸವಾಲಿನಲ್ಲಿ ಮುಂದುವರೆದು, ಶೌಚಾಲಯ ಮತ್ತು ಸೇಫ್ಟಿ ಟ್ಯಾಂಕ್ ಕಟ್ಟಿಸುವಾಗ ಪಂಚಾಯತಿಗೆ ಅರ್ಜಿ ಕೊಟ್ಟಿರುತ್ತೇವೆ. ಸದರಿ ಅರ್ಜಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಶೌಚಾಲಯವನ್ನು 2023 ರಲ್ಲಿ ಕಟ್ಟಿರುತ್ತೇನೆ ಯಾವ ತಿಂಗಳಲ್ಲಿ ಕಟ್ಟಿರುತ್ತೇನೆ ಎಂದು ನೆನಪಿಲ್ಲ. ವಾದಿಗಳು ನಾನು ಶೌಚಾಲಯ ಕಟ್ಟಿಸುವಾಗ ನಮ್ಮ ಜಾಗದಲ್ಲಿ ಕಟ್ಟಿಸುತ್ತಿದ್ದಾರೆಂದು ತಕರಾರು ಕೊಟ್ಟಿದ್ದರು ಎಂದರೆ ಸರಿ. ಸದರಿ ಜಾಗದಲ್ಲಿ ಶೌಚಾಲಯ ನಿರ್ಮಾಣ ಮಾಡಬಾರದೆಂದು ವಾದಿಗಳ ದಾವೆಯನ್ನು ಸಲ್ಲಿಸಿ ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶವನ್ನು ಪಡೆದುಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನಂತರ ಪಂಚಾಯತಿಯವರು ನಿಡಿ.12 ರವಂತೆ ಯಥಾಸ್ಥಿತಿ ಕಾಪಾಡಿಕೊಂಡು ಹೋಗಬೇಕೆಂದು ಆದೇಶ ಮಾಡಿದ್ದರು ಎಂದರೆ ಸಾಕ್ಷಿಯು ಶೌಚಾಲಯ

ನಿರ್ಮಾಣ ಮಾಡಿದ ನಂತರ ಆದೇಶ ಮಾಡಿದ್ದರು ಎಂದು ನುಡಿಯುತ್ತಾರೆ. ನಾನು ಹಾಜರುಪಡಿಸಿರುವ ನಿಡಿ.6 ದಾಖಲೆಯಂತೆ ವಾದಿಯರ ಪ್ಲಾಟನ ವಿಸ್ತೀರ್ಣ 34X25 ಅಡಿ ಇರುತ್ತದೆ ಎಂದರೆ ಸಾಕ್ಷಿಯು ಸುಳ್ಳು ಹೇಳಿ ಬರೆಸಿರುತ್ತಾರೆಂದು ನುಡಿಯುತ್ತಾರೆ. ನಿಡಿ.8 ರಲ್ಲಿ ಕಾಣಿಸಿರುವ ಚಕ್ಕಬಂದಿ ಸರಿ ಇರುತ್ತದೆ ಅದರಲ್ಲಿ ಪೂರ್ವ-ಪಶ್ಚಿಮ 20 ಅಡಿ, ಉತ್ತರ-ದಕ್ಷಿಣ 18 ಅಡಿ ಇರುತ್ತದೆ ಎಂದರೆ ಸರಿ. ನಾನು ಶೌಚಾಲಯವನ್ನು 20X18 ಅಡಿ ಒಳಗಡೆಯೇ ನಿರ್ಮಾಣ ಮಾಡಿರುತ್ತೇನೆ. ಶಾಂತಗೇರಿ ಪಂಚಾಯತಿಯವರು ಶೌಚಾಲಯ ನಿರ್ಮಾಣ ಮಾಡಲು ಲೈಸೆನ್ಸ್ ನೀಡಿದ ಬಗ್ಗೆ ದಾಖಲು ಹಾಜರುಪಡಿಸಿಲ್ಲ. ನಾನು ಪಂಚಾಯತಿಯವರಿಂದ ಯಾವುದೇ ಲೈಸೆನ್ಸ್ ಪಡೆದುಕೊಳ್ಳದೇ ಇದ್ದುದರಿಂದ, ಒಂದು ವೇಳೆ ಲೈಸೆನ್ಸ್ ಕೊಡುತ್ತಾರೆ ಎಂದು ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ.

34. ಈ ದಾವೆಯಲ್ಲಿ ವಾದಿಗಳ ಪರ ವಕೀಲರು ತಮ್ಮ ವಾದ ಮಂಡನೆಯ ಕಾಲಕ್ಕೆ ದಾವಾ ಆಸ್ತಿಯನ್ನು 1 ನೇ ವಾದಿಯ ಅಜ್ಜಿ ದುರಗವ್ವ ಎನ್ನುವವರು ದೇವದಾಸಿಯಾಗಿದ್ದು, ಅವರಿಗೆ ಸದರಿ ಆಸ್ತಿಯನ್ನು ಶಾಂತಗೇರಿ ಪಂಚಾಯತಿಯವರು ನೀಡಿದ್ದು, ಅವರ ಮರಣಾನಂತರ ಚನ್ನಪ್ಪರವರು ದಾವಾ ಆಸ್ತಿಯಲ್ಲಿ ಸ್ವಾಧೀನಾನುಭವದಲ್ಲಿ ಇದ್ದರು, ಸದರಿ ಚನ್ನಪ್ಪರವರು ಒಬ್ಬ ಹನಮವ್ವ ಎನ್ನುವವರನ್ನು ಮದುವೆಯಾಗಿದ್ದರು ಅವರಿಗೆ 1 ನೇ ವಾದಿ ಒಬ್ಬನೇ ಮಗನಾಗಿರುತ್ತಾನೆ, ಸದರಿ ದುರಗವ್ವರವರು ಜೀವಂತವಾಗಿದ್ದಾಗ ದಾವಾ ಆಸ್ತಿಯಲ್ಲಿ ಮನೆ ಕಟ್ಟಿಕೊಂಡು ವಾಸವಾಗಿದ್ದರು, ಆಕೆಯ ಮರಣಾನಂತರ ಚನ್ನಪ್ಪ ದಾವಾ ಆಸ್ತಿಯಲ್ಲಿ ಮಾಲೀಕನಾಗಿ ಸ್ವಾಧೀನಾನುಭವದಲ್ಲಿ ಇದ್ದನು, ತದನಂತರ ಶಾಂತಗೇರಿ ಗ್ರಾಮಪಂಚಾಯತಿಯವರು ಸಭೆ ನಂಬರಃ 15, ಠರಾವು ಸಂಖ್ಯೆ.98, ವಿ.ನಂಬರಃ 5, ಕ್ರಮ ಸಂಖ್ಯೆ.3 ದಿನಾಂಕಃ29.11.2006 ರ ಪ್ರಕಾರ ಆಸ್ತಿಯನ್ನು 1 ನೇ ವಾದಿಯ ಒಪ್ಪಿಗೆಯ ಮೇರೆಗೆ ಆತನ ಹೆಂಡತಿ ದುರಗವ್ವರವರಿಗೆ ಪಂಚಾಯತಿಯವರು ಮಂಜೂರು ಮಾಡಿದ್ದು, ಸದರಿ 1 ನೇ ವಾದಿಯ ಹೆಂಡತಿ ದುರಗವ್ವರವರು ದಿನಾಂಕಃ 10.06.2013 ರಂದು ವಾದಿಗಳನ್ನು

ವಾರಸುದಾರರನ್ನಾಗಿ ಬಿಟ್ಟು ಮರಣಹೊಂದಿದ್ದು, ವಾದಿಗಳ ಹೆಸರು ಪಂಚಾಯತಿ ದಾಖಲೆಗಳಲ್ಲಿ ನಮೂದು ಆಗಿರುವುದಿಲ್ಲ ಎನ್ನುವ ಸಂಗತಿಯನ್ನು ದುರುಪಯೋಗ ಪಡಿಸಿಕೊಂಡು ಪ್ರತಿವಾದಿಗಳಿಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು, ಅಧಿಕಾರ, ಹಿತಾಸಕ್ತಿ, ಸ್ವಾಧೀನಾನುಭವ ಇಲ್ಲದೇ ಇದ್ದರೂ ಸಹಾ ಪಂಚಾಯತಿ ಅಧಿಕಾರಿಗಳೊಂದಿಗೆ ಮಿಲಾಪಿಯಾಗಿ ಪಂಚಾಯತಿಯಿಂದ ತಮ್ಮ ಹೆಸರಿಗೆ ನಡಾವಳಿಕೆಗಳ ಮುಖಾಂತರ ಸೃಷ್ಟಿಸಿಕೊಡಿರುತ್ತಾರೆ, ಸೃಷ್ಟಿಸಿಕೊಂಡ ಪಂಚಾಯತಿ ನಡಾವಳಿಕೆಗಳಿಂದ ದಾವಾ ಆಸ್ತಿಗಳಲ್ಲಿ ಪ್ರತಿವಾದಿಗಳಿಗೆ ಯಾವುದೇ ಹಕ್ಕು ಪ್ರಾಪ್ತವಾಗುವುದಿಲ್ಲ, ಡಿ.ಡಬ್ಲ್ಯೂ.1 ರವರು ಗ್ರಾಮ ಪಂಚಾಯತಿಯಲ್ಲಿ ಗುತ್ತಿಗೆ ನೌಕರನಾಗಿ ಕೆಲಸ ಮಾಡುತ್ತಿದ್ದು, ದಾಖಲೆಗಳನ್ನು ಸೃಷ್ಟಿಸಿಕೊಂಡು ವಾದಿಗಳ ಆಸ್ತಿಯನ್ನು ಒತ್ತುವರಿ ಮಾಡಿಕೊಂಡು ಶೌಚಾಲಯವನ್ನು ನಿರ್ಮಾಣ ಮಾಡಿಕೊಂಡಿರುತ್ತಾರೆ, ಸದರಿ ದಾಖಲೆಗಳನ್ನು ಸೃಷ್ಟಿಸಿಕೊಂಡ ಸಂಗತಿಗಳನ್ನು ಡಿ.ಡಬ್ಲ್ಯೂ.1 ರವರು ಪಾಟೀ ಸವಾಲಿನ ಕಾಲಕ್ಕೆ ಒಪ್ಪಿಕೊಂಡಿರುತ್ತಾರೆ, ವಾದಿಗಳು ತಮ್ಮ ಮೌಖಿಕ ಹಾಗೂ ದಾಖಲೆಗಳ ಸಾಕ್ಷ್ಯದ ಮುಖಾಂತರ ದಾವಾ ಆಸ್ತಿಯಲ್ಲಿ ಶಾಂತಿಯುತ ಸ್ವಾಧೀನಾನುಭವದಲ್ಲಿ ಇರುತ್ತಾರೆಂದು ರುಜುವಾತುಪಡಿಸಿರುತ್ತಾರೆ. ಆದ್ದರಿಂದ ದಾವೆಯನ್ನು ಡಿಕ್ರಿ ಮಾಡಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

35. ವಾದಿಗಳು ತಮ್ಮ ವಾದಪತ್ರ ಹಾಗೂ ತಮ್ಮ ಸಾಕ್ಷ್ಯದಲ್ಲಿ ನುಡಿದಿರುವ ಸಂಗತಿಗಳನ್ನು ಗಮನಿಸಿದಾಗ 1 ನೇ ವಾದಿಯ ತಾಯಿ ದುರಗವ್ವ ಎಂದು ಇದ್ದು, ಅವರು ದೇವದಾಸಿಯಾಗಿ ಶಾಂತಗೇರಿಯಲ್ಲಿ ಇದ್ದರು ಎಂದು ಪ್ರತಿವಾದಿಗಳು ತಮ್ಮ ಲಿಖಿತ ತಕರಾರು ಹಾಗೂ ವಿಚಾರಣೆ ಕಾಲಕ್ಕೆ ಸಾಕ್ಷಿ ನುಡಿದಿರುವ ಸಂಗತಿಗಳಿಂದ ಕಂಡು ಬಂದಿರುತ್ತದೆ. ಈ ಅಂಶದ ಬಗ್ಗೆ ಉಭಯಪಕ್ಷಗಾರರಲ್ಲಿ ಯಾವುದೇ ವಿವಾದ ಇರುವುದಿಲ್ಲ. ಆದರೆ ಸದರಿ ದುರಗವ್ವರವರು ಜೀವಂತವಾಗಿದ್ದಾಗ ಮನೆ ಕಟ್ಟಿಕೊಂಡು ವಾಸವಾಗಿದ್ದರು, ಆಕೆಯ ಮರಣಾನಂತರ ಒಬ್ಬನೇ ಮಗ ಚನ್ನಪ್ಪರವರು ದಾವಾ ಆಸ್ತಿಯಲ್ಲಿ ಸ್ವಾಧೀನಾನುಭವದಲ್ಲಿ ಇದ್ದರು ಎಂದು ವಾದಿಗಳು ಯಾವುದೇ

ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಸದರಿ ಚನ್ನಪ್ಪರವರ ಮರಣಾನಂತರ ಆತನ ಒಬ್ಬನೇ ಮಗ ಈ ದಾವೆಯ 1ನೇ ವಾದಿ ದಾವಾ ಆಸ್ತಿಯಲ್ಲಿ ಮಾಲೀಕನಾಗಿ ಶಾಂತಿಯುತ ಸ್ವಾಧೀನಾನುಭವದಲ್ಲಿ ಇದ್ದನು, ಆನತ ಒಪ್ಪಿಗೆಯ ಮೇರೆಗೆ ದಾವಾ ಆಸ್ತಿಯನ್ನು ಪಂಚಾಯತಿಯವರು ಆತನ ಹೆಂಡತಿ ದುರಗವ್ವರವರಿಗೆ ಸಭೆ ನಂಬರಃ 15, ಠರಾವು ಸಂಖ್ಯೆ.98, ವಿ.ನಂಬರಃ5, ಕ್ರಮ ಸಂಖ್ಯೆ.3 ರ ಪ್ರಕಾರ ದಿನಾಂಕಃ 29.11.2006 ರ ಪ್ರಕಾರ ಮಂಜೂರಾಗಿರುತ್ತದೆಂದು, ಆಕೆಯ ಮರಣಾನಂತರ ವಾದಿಗಳು ದಾವಾ ಆಸ್ತಿಯಲ್ಲಿ ಮಾಲೀಕರಾಗಿ ಶಾಂತಿಯುತ ಸ್ವಾಧೀನಾನುಭವದಲ್ಲಿ ಇರುತ್ತಾರೆಂದು ವಾದಿಗಳು ತಮ್ಮ ವಾದಪತ್ರದಲ್ಲಿ ತಿಳಿಸಿ ಅದಕ್ಕೆ ಅನುಗುಣವಾಗಿ ಸಾಕ್ಷಿ ನುಡಿದಿರುತ್ತಾರೆ.

36. ಈ ಹಂತದಲ್ಲಿ ನ್ಯಾಯಾಲಯವು ವಾದಿಗಳು ಹಾಜರುಪಡಿಸಿರುವ ನಿಪಿ.1 ರಿಂದ 14 ದಾಖಲೆಗಳನ್ನು ಪರಿಶೀಲಿಸಿದಾಗ 1ನೇ ವಾದಿಯ ತಾಯಿ ದುರಗವ್ವರವರಿಗೆ ದಾವಾ ಆಸ್ತಿಯನ್ನು ಶಾಂತಗೇರಿ ಗ್ರಾಮ ಪಂಚಾಯತಿಯಿಂದ ಆಕೆಯು ದೇವದಾಸಿ ಆಗಿದ್ದರಿಂದ ಮಂಜೂರು ಮಾಡಿದ್ದರು ಎಂದು ತೋರಿಸುವ ಸಲುವಾಗಿ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಅದೇರೀತಿ ಸಭೆ ನಂಬರಃ 15, ಠರಾವು ಸಂಖ್ಯೆ.98, ವಿ.ನಂಬರಃ5, ಕ್ರಮ ಸಂಖ್ಯೆ.3 ರ ಪ್ರಕಾರ ದಿನಾಂಕಃ 29.11.2006 ರ ಪ್ರಕಾರ 1ನೇ ವಾದಿಯ ಹೆಂಡತಿ ದುರಗವ್ವ-1 ರವರಿಗೆ ಮಂಜೂರಾಗಿತ್ತು ಎಂದು ತಿಳಿಸಿದ್ದು, ಆ ಬಗ್ಗೆ ವಾದಿಗಳು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಕೇವಲ ಪಂಚಾಯತಿ ಉತಾರಗಳಾದ ನಿಪಿ.1 ಮತ್ತು 2 ಹಾಗೂ ದೃಢೀಕರಣ ಪತ್ರ, ನಿಪಿ.6 ದಾಖಲೆಗಳಲ್ಲಿ ಸಭೆ ನಂಬರಃ 15, ಠರಾವು ಸಂಖ್ಯೆ.98, ವಿ.ನಂಬರಃ5, ಕ್ರಮ ಸಂಖ್ಯೆ.3 ರ ಪ್ರಕಾರ ದಿನಾಂಕಃ 29.11.2006 ರ ಆ ರೀತಿ ಮಂಜೂರಾಗಿರುವ ಬಗ್ಗೆ ನಮೂದು ಇರುತ್ತದೆ. ಈ ಹಂತದಲ್ಲಿ ನ್ಯಾಯಾಲಯವು ಪ್ರತಿವಾದಿಗಳು ತಮ್ಮ ವಿಚಾರಣೆ ಕಾಲಕ್ಕೆ ಹಾಜರುಪಡಿಸಿರುವ ನಿಡಿ.2 ಮತ್ತು ಪಂಚಾಯತಿಯವರಿಗೆ ಸಮನ್ಸ್ ತೆಗೆದುಕೊಂಡು ಪಂಚಾಯತಿಯವರು ಹಾಜರುಪಡಿಸಿರುವ ನಿಡಿ.3, ನಿಡಿ.4,

ನಿಡಿ.5 ದಾಖಲೆಗಳನ್ನು ಪರಿಶೀಲಿಸಲಾಗಿ ಸಭೆ ನಂಬರಃ 15, ಠರಾವು ಸಂಖ್ಯೆ.98, ವಿ.ನಂಬರಃ5, ಕ್ರಮ ಸಂಖ್ಯೆ.3 ರನ್ನು ಪರಿಶೀಲಿಸಲಾಗಿ ಅದರಲ್ಲಿ ಶಾಂತಗೇರಿ ಗ್ರಾಮದ ಶ್ರೀ ಕೂಡ್ಲೆಪ್ಪ ಪಡಿಯಪ್ಪ ಜಾಲಿಹಾಳ ಇವರು ಕಟ್ಟಡ ನಿರ್ಮಾಣ ಮಾಡಲು ಪರವಾನಿಗೆ ಕೇಳಿ ಅರ್ಜಿ ಸಲ್ಲಿಸಿದ್ದು ಆ ಬಗ್ಗೆ ಪಂಚಾಯತಿಯವರು ತಕರಾರು ಬಾರದೆ ಇರುವುದರಿಂದ ಕಟ್ಟಡ ಪರವಾನಿಗೆ ಕೊಡಲು ಆದೇಶ ಮಾಡಿರುತ್ತಾರೆಂದು ಕಂಡು ಬಂದಿರುತ್ತದೆ. ಒಟ್ಟಾರೆಯಾಗಿ ನಿಪಿ.1, ನಿಪಿ.2, ನಿಪಿ.6 ದಾಖಲೆಗಳಲ್ಲಿ ನಮೂದು ಇರುವ ಪ್ರಕಾರ ಸಭೆ ನಂಬರಃ 15, ಠರಾವು ಸಂಖ್ಯೆ.98, ವಿ.ನಂಬರಃ5, ಕ್ರಮ ಸಂಖ್ಯೆ.3 ರ ಪ್ರಕಾರ ದಿನಾಂಕಃ 29.11.2006 ರಂದು ವಾದಿಗಳ ತಾಯಿ ದುರಗವ್ವ-1 ರವರ ಆಸ್ತಿಯು ಮಂಜೂರಾದ ಬಗ್ಗೆ ಎಲ್ಲಿಯೂ ಸಹಾ ನಮೂದು ಇರುವುದಿಲ್ಲವೆಂದು ಸ್ಪಷ್ಟವಾಗಿ ನ್ಯಾಯಾಲಯಕ್ಕೆ ಕಂಡು ಬಂದಿರುತ್ತದೆ. ಆದರೆ ವಾದಿಗಳ ಪರ ವಕೀಲರು ತಮ್ಮ ವಾದಮಂಡನೆ ಕಾಲಕ್ಕೆ ಪ್ರತಿವಾದಿಗಳು ದಾಖಲೆಗಳನ್ನು ಸೃಷ್ಟಿಸಿಕೊಂಡಿರುತ್ತಾರೆಂದು ಮಂಡಿಸಿರುವ ವಾದವನ್ನು ನ್ಯಾಯಾಲಯವು ಒಪ್ಪಿಕೊಂಡಿರುವುದಿಲ್ಲ.

37. ಈ ಹಂತದಲ್ಲಿ ಈ ಮೇಲೆ ತಿಳಿಸಲಾದ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳಲ್ಲಿ ತಿಳಿಸಿದ ಪ್ರಕಾರ ಯಾರು ದಾವೆಯನ್ನು ಮಾಲೀಕತ್ವ ಘೋಷಣೆ ಮತ್ತು ಶಾಶ್ವತ ಪ್ರತಿಬಂಧಕಾಜ್ಞೆ ಆದೇಶ ಕೋರಿ ಸಲ್ಲಿಸಿರುತ್ತಾರೆಯೋ ಅವರೇ ತಮ್ಮ ಮೌಖಿಕ ಹಾಗೂ ದಾಖಲೆಗಳ ಸಾಕ್ಷ್ಯದ ಮುಖಾಂತರ ನ್ಯಾಯಾಲಯದ ಮುಂದೆ ರುಜವಾತುಪಡಿಸಬೇಕು, ಪ್ರತಿವಾದಿಗಳ ದುರ್ಬಲತೆಯನ್ನು ವಾದಿಗಳು ಅಸ್ತ್ರವನ್ನಾಗಿ ಮಾಡಿಕೊಂಡು ನ್ಯಾಯಾಲಯದಿಂದ ಘೋಷಣಾತ್ಮಕ ಡಿಕ್ರಿಯನ್ನು ಪಡೆದುಕೊಳ್ಳಲು ಬರುವುದಿಲ್ಲವೆಂದು ಇರುತ್ತದೆ. ಈ ದಾವೆಯಲ್ಲಿಯೂ ಸಹಾ ವಾದಿಗಳು ಸಭೆ ನಂಬರಃ 15, ಠರಾವು ಸಂಖ್ಯೆ.98, ವಿ.ನಂಬರಃ5, ಕ್ರಮ ಸಂಖ್ಯೆ.3 ರ ಪ್ರಕಾರ ದಿನಾಂಕಃ 29.11.2006 ರಂದು ವಾದಿಗಳ ತಾಯಿ ದುರಗವ್ವ-1 ರವರಿಗೆ ದಾವಾ ಆಸ್ತಿಯು ಮಂಜೂರಾಗಿರುತ್ತದೆಂದು ತಿಳಿಸಿದ್ದು, ಸದರಿ ಮಂಜೂರಾತಿಗೆ

ಸಂಬಂಧಪಟ್ಟಂತೆ ಹಾಜರುಪಡಿಸಿರುವ ನಿಡಿ.1, ನಿಡಿ.2, ನಿಡಿ.3, ನಿಡಿ.5 ದಾಖಲೆಗಳನ್ನು ಪರಿಶೀಲಿಸಿದಾಗ ಆ ನಂಬರನಲ್ಲಿ ಬೇರೆ ವಿಷಯಕ್ಕೆ ಸಂಬಂಧಿಸಿದಂತೆ ತೀರ್ಮಾನ ಆದ ಬಗ್ಗೆ ಪಂಚಾಯತಿಯ ನಡಾವಳಿಕೆಯ ಬಗ್ಗೆ ನಮೂದು ಇರುತ್ತದೆ. ಅಲ್ಲದೆ ಸದರಿ ಮೇಲಿನ ತೀರ್ಪುಗಳಲ್ಲಿ ತಿಳಿಸಿದ ಪ್ರಕಾರ ಪಹಣಿ ಮತ್ತು ಎಂ.ಆರ್.ಗಳು ಹಾಗೂ ಖಾತಾ ಉತಾರಗಳು ಹಕ್ಕನ್ನು ನಿರೂಪಿಸುವಂತಹ ದಾಖಲೆಗಳು ಆಗಿರುವುದಿಲ್ಲವೆಂದು ಇದ್ದು, ಈ ದಾವೆಯಲ್ಲಿ ವಾದಿಗಳು ದಾವಾ ಆಸ್ತಿಗೆ ಸಂಬಂಧಿಸಿದಂತೆ ಮಾಲೀಕತ್ವ ಘೋಷಣೆ, ಹಾಗೂ ಆಜ್ಞಾಪಕ ನಿರ್ಬಂಧಕಾಜ್ಞೆ ಮತ್ತು ಶಾಶ್ವತ ಪ್ರತಿಬಂಧಕಾಜ್ಞೆ ಆದೇಶವನ್ನು ಕೇವಲ ಪಂಚಾಯತಿಯ ಉತಾರಗಳು, ಪಂಚಾಯತಿಗೆ ಸಲ್ಲಿಸಿದ ಅರ್ಜಿಗಳು, ಪಂಚಾಯತಿಯವರು ನೀಡಿದ ಚಕ್ಕಬಂದಿ ದಾಖಲೆಗಳನ್ನು ಆಧರಿಸಿ ಸಲ್ಲಿಸಿರುವುದರಿಂದ ಈ ದಾಖಲೆಗಳು ಹಕ್ಕನ್ನು ನಿರೂಪಿಸುವಂತಹ ದಾಖಲೆಗಳು ಆಗಿರುವುದಿಲ್ಲ.

38. ಈ ಹಂತದಲ್ಲಿ ವಾದಿಗಳು ಹಾಗೂ ಪ್ರತಿವಾದಿಗಳ ಪರವಾಗಿ ವಿಚಾರಣೆಗೊಳಗಾಗಿರುವ ಪಿ.ಡಬ್ಲ್ಯೂ.1 ಮತ್ತು 2 ಡಿ.ಡಬ್ಲ್ಯೂ.1 ಮತ್ತು 2 ರವರು ಪಾಟೀ ಸವಾಲಿನ ಕಾಲಕ್ಕೆ ಈ ಮೇಲಿನಂತೆ ಸಾಕ್ಷಿ ನುಡಿದಿರುವುದನ್ನು ಗಮನಿಸಿದಾಗ ವಾದಿಗಳು ತಮ್ಮ ತಂದೆಯ ಕಾಲದಿಂದಲೂ ದಾವಾ ಆಸ್ತಿಯಲ್ಲಿ ವಹಿವಾಟು ಮಾಡುವುದಾಗಿ ಸಾಕ್ಷಿ ನುಡಿದಿದ್ದು, ಆ ಬಗ್ಗೆ ನಿಪಿ.1 ಮತ್ತು 2 ದಾಖಲೆಗಳನ್ನು ಹೊರತುಪಡಿಸಿ, ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ, ಸದರಿ ಆಸ್ತಿಯು 1ನೇ ವಾದಿಯ ಅಜ್ಜಿ ದುರಗವ್ವರವರಿಗೆ ಪಂಚಾಯತಿಯವರಿಂದ ನೀಡಲ್ಪಟ್ಟಿತ್ತು ಎಂದು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಆ ಕಾರಣಕ್ಕಾಗಿ ಸದರಿ ಆಸ್ತಿಯ ವಿಸ್ತೀರ್ಣದ ಬಗ್ಗೆ ಪಿ.ಡಬ್ಲ್ಯೂ.1 ರವರು ಯಾವುದೇ ಮಾಹಿತಿ ಇಲ್ಲವೆಂದು ಕಂಡು ಬಂದಿರುತ್ತದೆ. ಅದೇರೀತಿ ಪಿ.ಡಬ್ಲ್ಯೂ.2 ರವರು ಅಳತೆಗೆ ಸಂಬಂಧಿಸಿದಂತೆ ನಾಯಾಲಯಕ್ಕೆ ಹಾಜರುಪಡಿಸಿರುವ ದಾಖಲೆಗಳನ್ನು ಹೊರತುಪಡಿಸಿ ಅವರಿಗೆ ಯಾವುದೇ ಮಾಹಿತಿ ಇಲ್ಲವೆಂದು ಕಂಡು ಬಂದಿರುತ್ತದೆ. ಡಿ.ಡಬ್ಲ್ಯೂ.1 ರವರು ತಮ್ಮ ಪಾಟೀ ಸವಾಲಿನ ಕಾಲಕ್ಕೆ

ವಾದಿಗಳ ಆಸ್ತಿ ಹಾಗೂ ಪ್ರತಿವಾದಿಗಳ ಆಸ್ತಿ ಮತ್ತು ವಿಸ್ತೀರ್ಣಗಳ ಬಗ್ಗೆ ಕೆಲವೊಂದು ಸಂಗತಿಗಳನ್ನು ಒಪ್ಪಿಕೊಂಡಿದ್ದರು ಸಹಾ ಕೇವಲ ಮೌಖಿಕ ಸಾಕ್ಷ್ಯವನ್ನು ಆಧರಿಸಿ ವಾದಿಯ ಪರವಾಗಿ ಡಿಕ್ರಿ ನೀಡಲು ಸಾಧ್ಯವಿಲ್ಲ, ಸದರಿ ಈ ದಾವೆಯನ್ನು ನ್ಯಾಯಾಲಯದ ಮುಂದೆ ವಾದಿಗಳು ಸಲ್ಲಿಸಿರುತ್ತಾರೆಯೋ ಹೊರತು ಪ್ರತಿವಾದಿಗಳು ಸಲ್ಲಿಸಿರುವುದಿಲ್ಲ, ಅಲ್ಲದೇ ಪ್ರತಿವಾದಿಗಳು ನ್ಯಾಯಾಲಯದ ಮುಂದೆ ಯಾವುದೇ ಪರಿಹಾರಗಳನ್ನು ಕೋರಿರುವುದಿಲ್ಲ, ಹಾಗಾಗಿ ಪ್ರತಿವಾದಿಗಳ ದುರ್ಬಲತೆಯನ್ನು ವಾದಿಗಳು ಅಸ್ತ್ರವನ್ನಾಗಿ ಮಾಡಿಕೊಳ್ಳಲು ಸಾಧ್ಯವಿಲ್ಲ.

39. ವಾದಿಗಳು ಹಾಜರುಪಡಿಸಿರುವ ಫೋಟೋ, ಮೆಮೋರಿ ಕಾರ್ಡ್ ಗಳನ್ನು ಪರಿಶೀಲಿಸಿದಾಗ, ದಾವಾ ಆಸ್ತಿಯಲ್ಲಿ ಶೌಚಾಲಯ ನಿರ್ಮಾಣ ಆದ ಬಗ್ಗೆ ಕಂಡು ಬಂದಿರುತ್ತದೆ. ಸದರಿ ಶೌಚಾಲಯವನ್ನು ಉಭಯಪಕ್ಷಗಾರರು ವಿಚಾರಣೆ ಕಾಲಕ್ಕೆ ನುಡಿದಿರುವ ಸಾಕ್ಷ್ಯವನ್ನು ಗಮನಿಸಿದಾಗ ಪ್ರತಿವಾದಿಗಳು ಗ್ರಾಮ ಪಂಚಾಯತಿಯಿಂದ ಪರವಾನಿಗೆಯನ್ನು ಪಡೆದುಕೊಂಡು ಶೌಚಾಲಯವನ್ನು ನಿರ್ಮಾಣ ಮಾಡಿರುತ್ತಾರೆಂದು ಸ್ಪಷ್ಟವಾಗಿ ನ್ಯಾಯಾಲಯಕ್ಕೆ ಕಂಡು ಬಂದಿರುತ್ತದೆ. ವಾದಿಗಳು 1ನೇ ವಾದಿಯ ಅಜ್ಜಿಗೆ ದೇವದಾಸಿ ಎಂದು ಪಂಚಾಯಿತಿಯಿಂದ ಆಸ್ತಿಯನ್ನು ನೀಡಿದ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ, ಅದೇರೀತಿ ಮುಂದುವರೆದು 1 ನೇ ವಾದಿ ಹಾಗೂ ಆತನ ಕುಟುಂಬದ ಸದಸ್ಯರ ಒಪ್ಪಿಗೆಯ ಮೇರೆಗೆ ದಿನಾಂಕಃ 29.11.2006 ರಂದು 1 ನೇ ವಾದಿಯ ಹೆಂಡತಿ ದುರಗವ್ವ- 1 ರವರಿಗೆ ಮಂಜೂರಾಗಿರುತ್ತದೆಂದು ನಿಪಿ.1 ಮತ್ತು 2 ದಾಖಲೆಗಳನ್ನು ಹಾಜರುಪಡಿಸಿದ್ದು, ಆ ರೀತಿ ನಿಪಿ.1 ಮತ್ತು 2 ರಲ್ಲಿ ನಮೂದಿಸಿರುವ ಪಂಚಾಯತಿ ನಡಾವಳಿಕೆಗಳ ಸಂಖ್ಯೆಗೂ ಮತ್ತು ಈ ದಾಖಲೆಗಳಿಗೂ ಒಂದಕ್ಕೊಂದು ಸಂಬಂಧ ಇರುವುದಿಲ್ಲ. ಆ ರೀತಿ ಯಾವುದೇ ದಾಖಲೆಗಳನ್ನು ಹಾಜರುಪಡಿಸದೆ ಇರುವುದರಿಂದ ವಾದಿಗಳು ದಾವಾ ಆಸ್ತಿಯಲ್ಲಿ ಮಾಲೀಕರಾಗಿ ಶಾಂತಿಯುತ ಸ್ವಾಧೀನಾನುಭವದಲ್ಲಿ ಇರುತ್ತಾರೆಂದು ನ್ಯಾಯಾಲಯ ನಂಬಲು ಸಾಧ್ಯವಿಲ್ಲ.

40. ಪಂಚಾಯತಿಯವರು ವಾದಿಗೆ ನೀಡಿರುವ ದೃಢೀಕರಣ ಪತ್ರ ಹಾಗೂ ಚಕ್ಕಬಂದಿಗೆ ಸಂಬಂಧಿಸಿದಂತೆ ನೀಡಿರುವ ನಿಪಿ.3 ಹಾಗೂ ಇತರ ದಾಖಲೆಗಳನ್ನು ಪರಿಶೀಲಿಸಿದಾಗ ಪಂಚಾಯತಿ ವ್ಯಾಪ್ತಿಯಲ್ಲಿ ಖಾಲಿ ಜಾಗ ಇದ್ದು, ಆ ಜಾಗವು ವಾದಿಗಳ ಮತ್ತು ಪ್ರತಿವಾದಿಗಳ ಆಸ್ತಿಗಳ ಮಧ್ಯೆ ಇದ್ದು, ಅದಕ್ಕೆ ಸಂಬಂಧಿಸಿದಂತೆ ಪಂಚಾಯತಿಯವರು ತಮ್ಮ ಅನುಕೂಲಕ್ಕೆ ತಕ್ಕಂತೆ ಮಾಡಿರುವ ಪಂಚಾಯತಿ ನಡಾವಳಿಕೆಗಳನ್ನು ಆಧರಿಸಿ ಉತಾರಗಳಲ್ಲಿ ನಮೂದಾಗಿದ್ದು, ಆ ಪ್ರಕಾರ ವಾದಿಗಳು ಮತ್ತು ಪ್ರತಿವಾದಿಗಳು ಆ ದಾಖಲೆಗಳನ್ನು ಆಧರಿಸಿ ನ್ಯಾಯಾಲಯದಲ್ಲಿ ದಾವೆ ಮಾಡಿ ದಾವೆಯನ್ನು ನಡೆಸುತ್ತಾ ಬಂದಿರುತ್ತಾರೆಂದು ಕಂಡು ಬಂದಿರುತ್ತದೆ. ವಿ.ಪಿ.ಸಿ ನಂಬರ: 651 ಕ್ಕೆ ಸಂಬಂಧಿಸಿದಂತೆ ನಿಪಿ.3 ರಂತೆ ಪಂಚಾಯತಿಯವರು ಚಕ್ಕಬಂದಿಯನ್ನು ನೀಡಿದ್ದು, ಸದರಿ ಆಸ್ತಿಯನ್ನು ಯಾರಿಗೆ ಸೇರಿತ್ತು ಎಂದು ಎಲ್ಲಿಯೂ ನಮೂದು ಇರುವುದಿಲ್ಲ. ಆದರೆ ವಿ.ಪಿ.ಸಿ ನಂಬರ: 721 ಕ್ಕೆ ಸಂಬಂಧಿಸಿದಂತೆ ಪ್ರತಿವಾದಿಗಳ ಕುಟುಂಬದ ಹನಮವ್ವರವರ ಹೆಸರು ಉತಾರದಲ್ಲಿ ಮತ್ತು ನಿಡಿ.8 ದಾಖಲೆಯಲ್ಲಿ ನಮೂದು ಇರುತ್ತದೆ.

41. ಈ ಹಂತದಲ್ಲಿ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ತೀರ್ಪು **SLP (Civil) NOS-No.27590/2025 Vadiyala Prabhakar Rao and others. V/s The Government of Andhra Pradesh and others:-**

> **Entries in Revenue records or Jamabandi serve only a "fiscal purpose". Their primary function is to enable the person whose name is mutated in the records to pay the land revenue in question.**
>
> **A revenue record is not a document of title and does not confer any ownership or title upon the person whose name appears in it. Further mutation does not**

**create or extinguish title and has absolutely no presumptive value regarding title.**

**While they do not prove title, revenue records can raise a presumption regarding possession.**

ಸದರಿ ತೀರ್ಪನ್ನು ಪರಿಶೀಲಿಸಿದಾಗ ಪಹಣಿ ಮತ್ತು ಎಂ.ಆರ್.ಗಳು ಹಕ್ಕನ್ನು ನಿರೂಪಿಸುವಂತಹ ದಾಖಲೆಗಳು ಆಗಿರುವುದಿಲ್ಲ, ಕೇವಲ ಸದರಿ ದಾಖಲೆಗಳನ್ನು ಸ್ವಾಧೀನಕ್ಕೆ ಸಂಬಂಧಪಟ್ಟಂತೆ ಮಾತ್ರ ನಿರ್ಧರಿಸಬಹುದಾದಂತಹ ದಾಖಲೆಗಳು ಆಗಿರುತ್ತವೆ ಎಂದು ಇರುತ್ತದೆ. ವಾದಿಗಳು ಈ ದಾವೆಯಲ್ಲಿ ನಿರಂತರವಾಗಿ ದಾವಾ ಆಸ್ತಿಯಲ್ಲಿ ಸ್ವಾಧೀನಾನುಭವದಲ್ಲಿ ಇರುತ್ತಾರೆಂದು ಯಾವುದೇ ಹಕ್ಕು ಪತ್ರವನ್ನಾಗಲೀ ಅಥವಾ ಸ್ವಾಧೀನದಲ್ಲಿ ಇರುತ್ತೇವೆಂದು ತೋರಿಸಲು ಕಂದಾಯ ರಶೀದಿಗಳನ್ನು ಹಾಜರುಪಡಿಸಿರುವುದಿಲ್ಲ. ಆದ್ದರಿಂದ ಈ ಮೇಲಿನ ತೀರ್ಪು ಈ ದಾವೆಯ ವಸ್ತು ವಿಷಯಕ್ಕೆ ಅನ್ವಯವಾಗುವಂತಹ ತೀರ್ಪು ಆಗಿರುತ್ತದೆ.

42. ಈ ದಾವೆಯಲ್ಲಿ ವಾದಿಗಳು ದಾವಾ ಆಸ್ತಿಯನ್ನು 1 ನೇ ವಾದಿಯ ತಾಯಿ ದುರಗವ್ವರವರು ದೇವದಾಸಿಯಾಗಿದ್ದುದರಿಂದ ಅವರಿಗೆ ಪಂಚಾಯತಿಯಿಂದ ನೀಡಲಾಗಿತ್ತು, ನಂತರ ದಿನಾಂಕಃ 29.11.2006 ರಂದು ಪಂಚಾಯತಿಯವರು ನಡಾವಳಿಕೆಯನ್ನು ನಡೆಸಿ, 1 ನೇ ವಾದಿಯ ಒಪ್ಪಿಗೆಯ ಮೇರೆಗೆ ದಾವಾ ಆಸ್ತಿಯನ್ನು ಆತನ ಹೆಂಡತಿ ದುರಗವ್ವ-1 ರವರಿಗೆ ಠರಾವಿನ ಮೂಲಕ ಮಂಜೂರು ಮಾಡಲಾಗಿರುತ್ತದೆಂದು ತಿಳಿಸಿದ್ದು, ಸದರಿ ಠರಾವನ್ನು ಪರಿಶೀಲಿಸಿದಾಗ ಆ ಠರಾವಿನಲ್ಲಿ ಬೇರೆ ನಮೂದುಗಳು, ನಮೂದು ಇರುತ್ತವೆ. ಸದರಿ ಪಂಚಾಯತಿಯಿಂದ 1 ನೇ ವಾದಿಯ ತಾಯಿಗೆ ಆಸ್ತಿಯನ್ನು ಪಂಚಾಯತಿಯಿಂದ ನೀಡಲಾಗಿತ್ತು ಅಥವಾ ದಿನಾಂಕಃ 29.11.2006 ರಂದು ಠರಾವಿನ ಮುಖಾಂತರ ದುರಗವ್ವ-1 ರವರಿಗೆ ದಾವಾ ಆಸ್ತಿಯನ್ನು ನೀಡಲಾಗಿತ್ತು ಎಂದು ರುಜುವಾತುಪಡಿಸುವ ಸಲುವಾಗಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳನ್ನು ಸಾಕ್ಷಿದಾರರನ್ನಾಗಿ ಮಾಡಿ,

ವಿಚಾರಣೆಗೊಳಪಡಿಸಿರುವುದಿಲ್ಲ, ಆ ರೀತಿ ಯಾವುದೇ ಪ್ರಯತ್ನವನ್ನು ವಾದಿಗಳು ಮಾಡದೇ ಇರುವುದನ್ನು ಗಮನಿಸಿದಾಗ ಕೇವಲ ಪಂಚಾಯತಿ ವ್ಯಾಪ್ತಿಯ ಆಸ್ತಿಯಲ್ಲಿ ತಮ್ಮ ಅನುಕೂಲಕ್ಕೆ ತಕ್ಕಂತೆ ಸ್ವಾಧೀನದಲ್ಲಿ ಇದ್ದರು ಎಂದು ಮಾತ್ರ ವಾದಿಗಳು ಹಾಜರುಪಡಿಸಿರುವ ದಾಖಲೆಗಳಿಂದ ಕಂಡು ಬಂದಿರುತ್ತದೆ.

43. ವಾದಿಗಳ ಪರ ವಕೀಲರು ತಮ್ಮ ವಾದಮಂಡನೆಯ ಕಾಲಕ್ಕೆ ಶಾಂತಗೇರಿ ಗ್ರಾಮ ಪಂಚಾಯತಿಯವರು ನಿಡಿ.2, ನಿಡಿ.3 ಮತ್ತು ನಿಡಿ.5 ರಂತೆ ಮಾಡಿರುವ ಠರಾವುಗಳು ಪ್ರತಿವಾದಿಗಳು ಪಂಚಾಯತಿಯವರೊಂದಿಗೆ ಮಿಲಾಪಿಯಾಗಿ ಸೃಷ್ಟಿಸಿಕೊಂಡ ದಾಖಲೆಗಳಾಗಿರುತ್ತವೆ ಎಂದು ವಾದಮಂಡಿಸಿದ್ದು, ಸದರಿ ಠರಾವುಗಳನ್ನು ಪ್ರಶ್ನಿಸಿ ವಾದಿಗಳು ಕಾರ್ಯನಿರ್ವಾಹಕ ಅಧಿಕಾರಿಗಳು ತಾಲ್ಲೂಕು ಪಂಚಾಯತಿರವರ ಮುಂದೆ ಯಾವುದೇ ಅಪೀಲನ್ನು ಸಲ್ಲಿಸಿರುವುದಿಲ್ಲ, ಈ ರೀತಿ ಅಪೀಲನ್ನು ಸಲ್ಲಿಸಿ ಠರಾವುಗಳು ರದ್ದುಗೊಳ್ಳದೆ ಇರುವುದರಿಂದ ವಾದಿಗಳ ಪರ ವಕೀಲರು ಠರಾವುಗಳಿಗೆ ಸಂಬಂಧಿಸಿದಂತೆ ಮಂಡಿಸಿರುವ ವಾದವನ್ನು ನ್ಯಾಯಾಲಯವು ಒಪ್ಪಿಕೊಂಡಿರುವುದಿಲ್ಲ. ವಾದಿಗಳು ತಮ್ಮ ಮೌಖಿಕ ಹಾಗೂ ದಾಖಲೆಗಳ ಸಾಕ್ಷ್ಯದ ಮುಖಾಂತರ ದಾವಾ ಆಸ್ತಿಯಲ್ಲಿ ಮಾಲೀಕರಾಗಿದ್ದು ಶಾಂತಿಯುತ ಸ್ವಾಧೀನಾನುಭವದಲ್ಲಿ ಇರುತ್ತಾರೆ, ಸದರಿ ವಾದಿಗಳ ಶಾಂತಿಯುತ ಸ್ವಾಧೀನಾನುಭವಕ್ಕೆ ಪ್ರತಿವಾದಿಗಳಿಗೆ ಯಾವುದೇ ಹಕ್ಕು, ಅಧಿಕಾರ, ಹಿತಾಸಕ್ತಿ, ಸ್ವಾಧೀನಾನುಭವ ಇಲ್ಲದೆ ಇದ್ದರೂ ಸಹಾ ತಂಟೇ ತಕರಾರು ಮಾಡಿರುತ್ತಾರೆಂದು ಮತ್ತು ಪ್ರತಿವಾದಿಗಳು ವಾದಿಗಳ ಆಸ್ತಿಯಲ್ಲಿ ಒತ್ತುವರಿ ಮಾಡಿ ಶೌಚಾಲಯವನ್ನು ನಿರ್ಮಾಣ ಮಾಡಿರುತ್ತಾರೆಂದು ತಮ್ಮ ಮೌಖಿಕ ಹಾಗೂ ದಾಖಲೆಗಳ ಮುಖಾಂತರ ರುಜುವಾತುಪಡಿಸಿರುವುದಿಲ್ಲ, ಆ ಕಾರಣಕ್ಕಾಗಿ ವಾದಿಗಳು ದಾವೆಯಲ್ಲಿ ಕೋರಿಕೊಂಡ ಪರಿಹಾರಗಳನ್ನು ಪಡೆದುಕೊಳ್ಳಲು ಅರ್ಹರಿರುವುದಿಲ್ಲ. ಆದ್ದರಿಂದ **ವಿವಾದಾಂಶ 1 ರಿಂದ 3 ಮತ್ತು ಹೆಚ್ಚುವರಿ ವಿವಾದಾಂಶ 1 ಕ್ಕೆ ನಕಾರಾತ್ಮಕವಾಗಿ ಉತ್ತರಿಸಲಾಗಿದೆ.**

44. **<u>ವಿವಾದಾಂಶ 4:</u>** ಈ ಮೇಲಿನ ವಿವಾದಾಂಶ 1 ರಿಂದ 3 ಮತ್ತು ಹೆಚ್ಚುವರಿ ವಿವಾದಾಂಶ 1 ರಲ್ಲಿ ಚರ್ಚಿಸಲಾದಂತೆ ಮಾಡಲಾದ ಆದೇಶ.

**::ಆದೇಶ::**

- ವಾದಿಗಳ ದಾವೆಯನ್ನು ಖರ್ಚು ಸಹಿತ ವಜಾಗೊಳಿಸಲಾಗಿದೆ.
- ಕಛೇರಿಯು ಆ ಪ್ರಕಾರವಾಗಿ ಡಿಕ್ರಿ ಬರೆಯತಕ್ಕದ್ದು.

(ತೀರ್ಪನ್ನು ಶೀಘ್ರಲಿಪಿಗಾರರಿಗೆ ಗಣಕ ಯಂತ್ರದ ಮೇಲೆ ಉಕ್ತಲೇಖನ ನೀಡಿ, ಬೆರಳಚ್ಚು ಮಾಡಿಸಿ ತಿದ್ದಿ ತೆರೆದ ನ್ಯಾಯಾಲಯದಲ್ಲಿ ದಿಃ 22.07.2026 ರಂದು ಉದ್ಘೋಷಿಸಲಾಯಿತು)

MAHADEVAPPA H
Digitally signed by MAHADEVAPPA H
Date: 2026.07.29 11:23:11 +0530

**(ಮಹದೇವಪ್ಪ.ಹೆಚ್)**
**ಹಿರಿಯ ಸಿವಿಲ್ ನ್ಯಾಯಾಧೀಶರು,**
**ರೋಣ.**

**::ಅನುಬಂಧಗಳು::**

**<u>ವಾದಿಯ/ರ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿದಾರರುಃ</u>**

ಪಿ.ಡಬ್ಲ್ಯೂ.1: ಪರಸಪ್ಪ ತಂದೆ ಮರಿಯಪ್ಪ ಮಾದರ @ ಹುಣಸಿಮರದ.

ಪಿ.ಡಬ್ಲ್ಯೂ.2: ವೀರಣ್ಣ ತಂದೆ ಮರಿಯಪ್ಪ ಮಾದರ @ ಹುಣಸಿಮರದ.

**<u>ವಾದಿಯ/ರ ಪರವಾಗಿ ಗುರುತಿಸಲ್ಪಟ್ಟಿರುವ ದಾಖಲೆಗಳುಃ</u>**

ನಿಪಿ.1 ಮತ್ತು 2: 2 ಅಸೆಸಮೆಂಟಗಳು.

ನಿಪಿ.3: ಕಾರ್ಯದರ್ಶಿಯವರು ನೀಡಿರುವ ನಕ್ಷೆ.

ನಿಪಿ.4: ಪಿ.ಡಿ.ಓ ರವರಿಗೆ ನೀಡಿರುವ ಅರ್ಜಿಯ ಸ್ವೀಕೃತಿ.

ನಿಪಿ.5: ಗ್ರಾಮ ಪಂಚಾಯತಿ ಅಧ್ಯಕ್ಷರಿಗೆ ನೀಡಿರುವ ಅರ್ಜಿಯ ಸ್ವೀಕೃತಿ.

ನಿಪಿ.6: ಪಿ.ಡಿ.ಓ ರವರಿಗೆ ನೀಡಿರುವ ದೃಢೀಕೃತ ಪತ್ರ.

ನಿಪಿ.7: ರೇಶನ್ ಕಾರ್ಡ್.

ನಿಪಿ.8: ಮರಣ ದೃಢೀಕರಣ ಪತ್ರ.

ನಿಪಿ.9 ರಿಂದ 12: 4 ಫೋಟೋಗಳು.

ನಿಪಿ.13 : ಮೆಮರಿ ಕಾರ್ಡ್.

ನಿಪಿ.14 : 65 ಬಿ ಸರ್ಟಿಫಿಕೇಟ್.

**<u>ಪ್ರತಿವಾದಿಯ/ರ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿದಾರರು:</u>**

ಡಿ.ಡಬ್ಲ್ಯೂ.1: ಮರಿಯಪ್ಪ ತಂದೆ ಹೊನ್ನಪ್ಪ ಮಾದರ.

**<u>ಪ್ರತಿವಾದಿಯ/ರ ಪರವಾಗಿ ಗುರುತಿಸಲ್ಪಟ್ಟಿರುವ ದಾಖಲೆಗಳು:</u>**

ನಿಡಿ .1: 2001-2002 ನೇ ವರ್ಷದ ಬಗ್ಗೆ ಪಂಚಾಯತದ ಮನೆಯ/ ನಮೂನೆ 15 ರ ದೃಢೀಕೃತ ನಕಲು.

ನಿಡಿ .1(ಎ): ವಿ.ಪಿ.ಸಿ ನಂಬರ: 651 ಕ್ಕೆ ಸಂಬಂಧಿಸಿದ ಠರಾವಿನ ದೃಢೀಕೃತ ನಕಲು.

ನಿಡಿ .2: ಒಂದು ಠರಾವಿನ ದೃಢೀಕೃತ ನಕಲು.

ನಿಡಿ .2(ಎ): ಠರಾವಿನಲ್ಲಿ ಪಿ.ಡಬ್ಲ್ಯೂ.2 ರವರ ತಂದೆಯ ಸಹಿ.

ನಿಡಿ .3: ದಿ: 29.11.2006 ಶಾಂತಗೇರಿ ಪಂಚಾಯತಿಯವರು ಮಾಡಿರುವ ಠರಾವಿನ ದೃಢೀಕೃತ ನಕಲು.

ನಿಡಿ .4: ಖಾತಾ ಉತಾರಿನ ದೃಢೀಕೃತ ನಕಲು.

ನಿಡಿ .5: ದಿ: 12.12.2012 ರ ಪ್ರೊಸಿಡಿಂಗ್ ಬುಕ್ಕನ ದೃಢೀಕೃತ ನಕಲು.

ನಿಡಿ .6: ಖಾತಾ ಉತಾರ.

ನಿಡಿ .7: ಖಾತಾ ಉತಾರ.

ನಿಡಿ .8 ಮತ್ತು 9: 2 ಗ್ರಾಮ ಪಂಚಾಯತಿಯವರು ನೀಡಿರುವ ನಕಾಶೆಗಳು.

ನಿಡಿ .10: ಗ್ರಾಮ ಪಂಚಾಯತಿಯ ನಡಾವಳಿಕೆಯ ದೃಢೀಕೃತ ನಕಲು.

ನಿಡಿ .11: ಗ್ರಾಮ ಪಂಚಾಯತಿಯವರು ನೀಡಿರುವ ಮನೆ ಮತ್ತು ಭೂಮಿ ಮತ್ತು ಆಕರಣೆಯ ಯಾದಿಯ ದೃಢೀಕೃತ ನಕಲು.

ನಿಡಿ .12: ಶಾಂತಗೇರಿ ಗ್ರಾಮ ಪಂಚಾಯತಿಯವರು ನೀಡಿರುವ ಸ್ಥಾನಿಕ ಚೌಕಾಸಿ ವರದಿ.

MAHADEVAPPA H

Digitally signed by MAHADEVAPPA H
Date: 2026.07.29 11:22:59 +0530

**ಹಿರಿಯ ಸಿವಿಲ್ ಜಡ್ಜ್ ಮತ್ತು ರೋಣ.**